ಪ್ರಸಂಗ ಅರ್ಥಸಹಿತ

ತಾರೋತ್ಪತ್ತಿ

ಅಥವಾ

ವಾಲಿ ವಿವಾಹ

ಅರ್ಥ ಬರೆದವರು



ಬಿ. ಬಾಬು ಕುಡ್ತಡ್ಕ

(ಯಕ್ಷಗಾನ ಕಲಾವಿದ)

ಕಲಾಪ್ರಸಾದ ಹೌಸ್, P. O. ಬಜಾಲ್, ಮಂಗಳೂರು-7.

ಎರಡನೇ ಮುದ್ರಣ ಬೆಲೆ: ರೂ. 1-00

॥ ಶ್ರೀ ಗುರು ರಾಘವೇಂದ್ರಾಯ ನಮಃ ॥

॥ ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ ಭಜತಾಂ
ಕಲ್ಪವೃಕ್ಷಾಯ ನಮತಾಂ ಕಾಮಧೇನವೆ ॥

ಶು ಭಾ ಶ ಯ

ಶ್ರೀ ಬಾಬು ಕುಡ್ತಡ್ಕ ಇವರು ತಾರೋತ್ಪತ್ತಿ ಅಥವಾ ವಾಲಿ ವಿವಾಹ ವೆಂಬ ಪ್ರಸಂಗಕ್ಕೆ ಬರೆದ ಅರ್ಥ ವಿವರಣೆಯು ಬಹಳ ಸ್ತುತ್ಯಾರ್ಹವಾಗಿದೆ.

ಇಂತಹ ಪ್ರಸಂಗಕ್ಕೆ ಅರ್ಥ ವಿವರಣೆಯನ್ನು ಬರೆದು ಸಾರ್ವಜನಿಕರ ಉಪಯೋಗಕ್ಕಾಗಿ ಪ್ರಕಟಿಸುವುದು ಇಂದಿನ ಬೆಲೆಯೇರಿಕೆಯ ಪರಿಸ್ಥಿತಿಯಲ್ಲಿ ಸುಲಭದ ಕೆಲಸವಲ್ಲ. ಬರೆದ ಅರ್ಥ ವಿವರಣೆಯನ್ನು ಕೂಲಂಕಶವಾಗಿ ಪರಿಶೀಲಿಸಿ ನೋಡಿದೆ. ಪರಿಗ್ರಹಿತವಾದ ಪದ್ಯಗಳ ಜೋಡಣೆಯಲ್ಲಿ ಲಘುವಾದ ಭಾಷೆಯಲ್ಲಿ, ಸರಳವಾದ ಶೈಲಿಯಲ್ಲಿ, ಭಾವಾತ್ಮಕವಾದ ಪದಪ್ರಯೋಗದಲ್ಲಿ ರಸಾತ್ಮಕವಾದ ವಾಕ್ಯ ರಚನೆಗಳಿಂದ ವಿಜೃಂಭಿತವಾಗಿದೆ.

ಆಯಾ ಪಾತ್ರಗಳ ಗುಣ ಸ್ವಭಾವಗಳಿಗೆ ಸರಿಯಾದ ಅರ್ಥ ನಿರೂಪಣೆಯು ಯಕ್ಷಗಾನ ಕೂಟಕ್ಕೂ, ಬಯಲಾಟದ ವೇಷಕ್ಕೂ, ಉಪಯುಕ್ತವಾದ ಶೈಲಿಯಲ್ಲಿದೆ. ಪ್ರಾಯಶಃ ಬಿ. ಬಾಬುರವರು ಯಕ್ಷಗಾನ ಕೂಟದಲ್ಲಿ ಅರ್ಥಧಾರಿಯೂ, ಬಯಲಾಟದಲ್ಲಿ ವೇಷಧಾರಿಯೂ, ಆದುದರಿಂದ ಈ ರೀತಿಯ ಅರ್ಥ ವಿವರಣೆಯು ಅವರಿಂದ ಪ್ರಸ್ಫುರಿತವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಇಂತಹ ಒಂದು ಪ್ರಸಂಗಕ್ಕೆ ಅರ್ಥ ವಿವರಣೆಯನ್ನು ಬರೆದು ಯಕ್ಷಗಾನ ಕಲಾದೇವಿಗೆ ಒಂದು ಪುಷ್ಪವಾಗಿ ಅರ್ಪಿಸಿರುವ ಇವರ ಈ ಪ್ರಸಂಗವು ಜನಾನುರಾಗವನ್ನು ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಪುಸ್ತಕಕ್ಕೆ ಶಾಶ್ವತವಾದ ನೆಲೆಯನ್ನೂ, ಶುಭಾಶಯವನ್ನೂ ಶ್ರೀ ಪಾರ್ವತಿ ಪರಮೇಶ್ವರರು ಸದಾ ಅನುಗ್ರಹಿಸಲೆಂದು ಹಾರ್ದಿಕವಾಗಿ ಹಾರೈಸುತ್ತೇನೆ.

ಕಂಕನಾಡಿ,
20-8-1977.

ಇತಿ, ಸಜ್ಜನ ವಿಧೇಯ
ವೈದ್ಯ ಬಿ. ದಾಸಪ್ಪ.

General Proficiency
II prize in the year 1976-77

ಅ ರಿ ಕೆ

ಕಲೆಯಲ್ಲಿ ಯಕ್ಷಗಾನವು ಬಹು ಜನಾದರಣೀಯವಾಗಿದೆ. ಇದು ಜಾನಪದ ಕಲೆಯೆನಿಸಿದರೂ ಇದರಲ್ಲಿ ಸಂಗೀತ, ಸಾಹಿತ್ಯ, ನೃತ್ಯ, ಚಿತ್ರಗಳೆಂದು ನಾಲ್ಕು ವಿಧಗಳಿಂದೊಡಗೂಡಿದುದರಿಂದಲೇ ಬಹುಅಂಶ ಜನರನ್ನು ಶ್ರೀಮಂತ, ಬಡವ, ಪಂಡಿತ, ಪಾಮರರೆನ್ನುವ ಭೇದವಿಲ್ಲದೆ ತನ್ನೆಡೆಗೆ ಸೆಳೆಯುವ ಚೈತನ್ಯ ಹೊಂದಿದೆಯೆನ್ನುವುದಕ್ಕೆ ಈ ಕಲಾಸೇವೆಯನ್ನು ಮಾಡುವ ಅಪಾರ ಜನಾಂಗವೇ ಸಾಕ್ಷಿ.

ಸಮುದ್ರ ಮಥನದಲ್ಲಿ ವಾಲಿ ಭಾಗವಹಿಸಿದಾಗ ಉದಿಸಿಬಂದ ತಾರಾದೇವಿಯ ಕಥೆಯಿದು. ಅದಕ್ಕಾಗಿ ತಾರೋತ್ಪತ್ತಿ ಎನ್ನುವ ಹೆಸರನ್ನಿಟ್ಟು ಇದಕ್ಕೆ ಅರ್ಥ ಬರೆದುದಾಗಿದೆ. ಈ ಭಾಗ ಆಟದಲ್ಲಿ ಮಾತ್ರ ಬಳಕೆಗೆ ಬಂದಿರುವುದು. ಇದನ್ನು ಯಕ್ಷಗಾನ ಕೂಟದಲ್ಲೂ ಬಳಕೆಗೆ ತರುವುದಕ್ಕೆ ಪ್ರಯತ್ನಿಸಿದ ನಾನು ಕೆಲವು ಕೂಟಗಳಲ್ಲಿ ಈ ಭಾಗವನ್ನು ಇಡಿಸಿದ್ದೂ ಇದೆ. ಈ ತಾರೋತ್ಪತ್ತಿ ಭಾಗದಲ್ಲಿ ಚಿತ್ತಾಕರ್ಷಿತನಾದ ನಾನು ಆಟದಲ್ಲಿ ವೇಷ ಮಾಡಿಯೂ, ಕೂಟದಲ್ಲಿ ಅರ್ಥಹೇಳಿಯೂ ತೃಪ್ತಿಹೊಂದದೆ ಇದಕ್ಕೊಂದು ಅರ್ಥ ಬರೆದು ಮಾತುಗಾರಿಕೆ ಅಭ್ಯಾಸಮಾಡುವ ಯಕ್ಷಗಾನ ಕಲಾಗಾರರ ಗಮನಕ್ಕೆ ತರಬೇಕೆಂದು ಆಸೆಪಟ್ಟು ಬರೆದಿರುತ್ತೇನೆ. ಪುಟಗಳ ಸಂಖ್ಯೆ ಹೆಚ್ಚಾಗದಂತೆ ಅರ್ಥ ವಿವರಣೆಯನ್ನು ಆದಷ್ಟು ಸಂಕ್ಷೇಪಗೊಳಿಸಿರುತ್ತೇನೆ. ಆದರೆ ಇದೇನೂ ಬೃಹತ್ ಗ್ರಂಥವಲ್ಲ. ಯಕ್ಷಗಾನ ಕಲಾ ಸೇವಕನ ತೊದಲು ನುಡಿ ಎಂದು ಗ್ರಹಿಸಿ ವಿದ್ವಾಂಸರು ಆಶೀರ್ವದಿಸಿಯಾರು ಎಂದು ನಂಬುತ್ತೇನೆ. ಇನ್ನು ಇದನ್ನು ಓದಿ ಶುಭಾಶಯವನ್ನಿತ್ತ ನನ್ನ ಪೂಜ್ಯ ಗುರುಗಳಾದ ವೈದ್ಯ ಶ್ರೀ ಬಿ. ದಾಸಪ್ಪನವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಪ್ರೈಮ್ ಪ್ರೆಸ್‌ನ ಮಾಲಕರಿಗೂ ಹಾಗೂ ಕೆಲಸಗಾರರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಇತಿ ವಿದ್ವಜ್ಜನ ವಿಧೇಯ,

20-8-1977. ಬಿ. ಬಾಬು ಕುಡ್ತಡ್ಕ.

ಅರ್ಥಸಹಿತ

ತಾರೋತ್ಪತ್ತಿ ಅಥವಾ ವಾಲಿ ವಿವಾಹ

(ಯಕ್ಷಗಾನ)

ಶಾರ್ದೂಲ ವಿಕ್ರೀಡಿತಂ

ಸರ್ವೇಶಂ ಸುರಸೇವ್ಯ ಮಾನ ಚರಣಂ ದೈತ್ಯೇ ಭ ಪಂಚಾನನಂ
ಸರ್ವಾತ್ಮಂ ತ್ರಿಗುಣಾಕರಂ ಗುಣನಿಧಿಂ ಕ್ಷೀರಾಬ್ಧಿ ವಾಸಂ ಹರಿಂ ।
ಸರ್ವಾನಂದ ಕೃಪಾರ್ಣವಂ ಹರಸಖಂ ಲಕ್ಷ್ಮೀ ಮನೋಹಾರಕಂ
ಸರ್ವೇಷ್ಟಾರ್ಥ ಫಲಪ್ರದಂ ನರಹರಿಂ ಧ್ಯಾಯಾನ್ ಕಂಠೀರವವರ್

ಭಾಮಿನಿ

ಪದ್ಯ : ಓಲಗದೊಳೊಪ್ಪಿರ್ದ ದಿತಿಜರ । ಪಾಳಯದಿ ಬಲಿಯಖಿಳ ವಿಭವದಿ । ಕೇಳಿಸಿತು ಹೊರವಳಯದಲ್ಲಿ ಭಟ್ಟರಟ್ಟಹಾಸಗಳೂ ॥ ಕಾಳಗವ ನಿಲಿಸುತ್ತ ಕಾವಲಿ । ನಾಳುಗಳ ಕರೆತರಿಸಿ ದ್ವಾರದಿ | ಮೇಲುವರಿದವರಾರೆನಲು ಬಿನ್ನೈಸಿದರು ಮಣಿದೂ ॥ ೧ ॥

ಅರ್ಥ - ಬಲಿ · ಶ್ರೀ ಹರಿ ಪರಿಪಾಲಿಸು ಸುರರ ವೈರತ್ವವು ಸರಿಯಲ್ಲ ವೆಂದು ನಾಕದ ಭೋಗ ಭಾಗ್ಯ ನನಗೆ ಬೇಡವೆಂದೂ ನಿಷ್ಠೆಯಿಂದಿದ್ದರೂ ನಾರದರ ಪ್ರೇರಣೆಯಿಂದ ಈ ಕಾರ್ಯಕ್ಕೆ ಇಳಿಯಲೇಬೇಕಾಯಿತು. ಆದರೆ ಈಗ ಮನಸ್ಸಿಗೆ ತುಂಬಾ ನೆಮ್ಮದಿ. ಏಕೆಂದರೆ ಸುರಪನು ಅನ್ಯಾಯಗಾರನಲ್ಲ ದಿದ್ದರೆ ಖಂಡಿತವಾಗಿಯೂ ನಮಗೆ ಜಯ ದೊರೆಯುತ್ತಿರಲಿಲ್ಲ. ಅಲ್ಲದೆ ಮುನಿಪೋತ್ತಮರ ಶಾಪಕ್ಕೆ ಅವನು ಒಳಗಾಗುತ್ತಿದ್ದಿಲ್ಲ. ಶಾಪವು ಫಲಿಸಿದೆ ಎನ್ನುವುದಕ್ಕೆ ಇಲ್ಲಿಯ ಸಂಪತ್ತು ಕಾಣೆಯಾಗಿರುವುದೇ ಆಧಾರವಾಗಿರುತ್ತದೆ. ಹೇಗೂ ಇರಲಿ! ನಡೆದಂತಹ ಧುರದಲ್ಲಿ ನಮ್ಮ ಪಾಲಿಗೆ ಜಯವಾಯಿತು. ಒದಗಿದ ಜಯಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ನಮ್ಮವರನ್ನು ಕೂಡಿಸಿ ಸಂಭ್ರಮದ ಸಭೆ ಕೊಟ್ಟದ್ದಾಗಿದೆ. ಹಾ! ಅದೇನು ಕೇಳಿಸುತ್ತಿರು ವುದು! ಬಾಗಿಲಲ್ಲಿ ದೂತರ ಬೊಬ್ಬೆಯೇ? ಯಾರಲ್ಲಿ! ಆ ದೂತರನ್ನು ಇಲ್ಲಿಗೆ ಬರಹೇಳಿ.

ದೂತ: (ಪ್ರವೇಶಿಸಿ) ಮಹಾಪ್ರಭೋ ವಂದಿಸಿಕೊಂಡಿದ್ದೇವೆ. ದ್ವಾರದಲ್ಲಿ ನಡೆವಂತಹ ಗಲಭೆಯ ವಿಷಯವನ್ನು ಬಿನ್ನೈಸಿಕೊಳ್ಳುತ್ತೇವೆ. ಅವಧರಿಸಬೇಕು.

ರಾಗ ಮುಖಾರಿ ಏಕತಾಳ

ಪದ್ಯ: ಬಲಿಮಹಾರಾಜ ಲಾಲಿಸೈಯ್ಯ । ಪೊಸತೊಂದು ವಾರ್ತೆ । ತಿಳಿದು ನೋಡಲು ಮಹಾಶ್ಚರ್ಯ । ಕಲಹವೆಸಗಿ ಜಯ ಫಲಸದೆಮ್ಮಿದಿರಿಗೆ । ನಿಲದೋಡಿದ ಬ । ರ್ದಿಲರೈದಿಹರೈ ॥ ೧ ॥

ದೂತ: ದೊರೆಯೇ ನಿಮ್ಮ ಅಪ್ಪಣೆಯಂತೆ ನಾವು ಬಾಗಿಲಲ್ಲಿ ಕಾವಲು ನಡೆಸುತ್ತಿರುವಾಗ ಇದೊಂದು ಹೊಸ ಘಟನೆ ನಡೆಯಿತು. ಈ ಮೊದಲು ನಮ್ಮಲ್ಲಿ ಯುದ್ಧ ಮಾಡಿ ಸೋತು ಓಡಿದಂತಹ ದೇವತೆಗಳು ಪುನಃ ಬಂದು ಒಳಗೆ ಬರುವುದಕ್ಕಾಗಿ ಪ್ರಯತ್ನಿಸುತ್ತಿರುವರು. ನಾವು ಅವರನ್ನು ತಡೆಯಲು ನಮಗೂ ಅವರಿಗೂ ಘರ್ಷಣೆ ನಡೆಯಿತು. ಅವರು ಈಗಲೂ ಹೋಗಲಿಲ್ಲ. ಅಲ್ಲೇ ನಿಂತಿರುವರು.

ಬಲಿ: ಚಾರಕರೆ! ಬಂದಿರುವ ದೇವತೆಗಳು ಮೊದಲಿನಂತೆ ಯುದ್ಧ ಸನ್ನದ್ಧರಾಗಿ ಬಂದಿರುವರೇ ಅಲ್ಲ ಬೇರೆ ರೀತಿಯೋ? ಹೇಳಿ.

ದೂತ: ಆ ವಿಷಯ ಲಾಲಿಸಬೇಕು ಪ್ರಭೋ —

ಪದ್ಯ: ನಡುಗುತ್ತ ತೋರಿ ನಟನೆಯನೂ | ಧನುಶರ ಕೈಯೊ । ಳಿಡಿಯದೆ ಪೊಕ್ಕು ಯತ್ನಗಳನೂ ॥ ನಡೆಸುತ ನಮ್ಮನು । ಕೆಡಿಸುವರೆಂಬುದ । ದೃಢವಾಂತವದಿರ । ಬಿಡುವೆವೆ ಧೂರ್ತರ ತಡೆದು ಬಡಿದು ಹೊರ । ಪಡಿಸೆದೆವೊಮ್ಮೆಗೆ । ಮೃಡ ನಮಗಿದಿರೇ । ಒಡೆಯ ಪರಾಕು ॥ ೨ ॥

ದೂತ: ಸ್ವಾಮಿನ್ ಹಿಂದೆ ಬಂದಂತೆ ಆಯುಧಗಳನ್ನು ಹಿಡಿದು ದಿಟ್ಟತನದಿಂದ ದೇವೇಂದ್ರಾದಿ ದೇವತೆಗಳು ಬಂದಿಲ್ಲ. ಬರಿಕೈಯಲ್ಲಿ ನಡುಗುತ್ತ ಭಯಗೊಂಡವರಂತೆ ಕಾಣಿಸುತ್ತಿರುವರು. ಆದರೆ ನಾವು ಬುದ್ಧಿವಂತರಲ್ಲವೇ? ಹಾಗಾಗಿ ದೇವತೆಗಳ ಗುಟ್ಟನ್ನು ತಿಳಿದುಕೊಂಡಿದ್ದೇವೆ. ಅವರು ನಿಜವಾಗಿಯೂ ಹೆದರುವುದಲ್ಲ; ಬರಿಯ ನಟನೆಯಿದ್ದಿರಬೇಕು. ತಗ್ಗಿ ಬಗ್ಗಿ

ವಿನಯ ತೋರಿಸಿ ಒಳಪ್ರವೇಶಮಾಡಿ ಉಪಾಯದಿಂದ ನಮ್ಮನ್ನು ಕೆಡಿಸುವುದಕ್ಕಾಗಿ ಬಂದಿರಬೇಕು. ಅದಕ್ಕಾಗಿ ಅವರನ್ನು ತಡೆದು ಹೊರಗೇ ನಿಲ್ಲಿಸಿರುವೆವು. ಪ್ರಭೋ! ಮುಂದೇನು ಎಂಬುದು ಅಪ್ಪಣೆಯಾಗಬೇಕು.

ರಾಗ ಭೈರವಿ ಝಂಪೆತಾಳ

ಪದ್ಯ: ದೂತರಿಂತೆನಲು ಬಲಿ । ತಾ ತಿಳಿದ ಮನದಿ ಪುರು । ಹೂತ ನಮ್ಮಧಟಿಂಗೆ । ಭೀತಿಗೊಂಡಿರುವಾ ॥ ೧ ॥

ಬಲಿ: ಭೃತ್ಯರೇ, ದೇವೇಂದ್ರಾದಿ ದೇವತೆಗಳು ನಡುಗುತ್ತ ನಿರಾಯುಧರಾಗಿ ಬಂದಿರುವರೇ? ಈಗ ಅರ್ಥವಾಯ್ತು. ಅಂದು ನಡೆದ ಯುದ್ಧದಲ್ಲಿ ಇಂದ್ರನಿಗೆ ನಮ್ಮ ಶೌರ್ಯದ ಬಗೆ ಚೆನ್ನಾಗಿ ಅರ್ಥವಾಗಿರುತ್ತದೆ. ಹಾಗಾಗಿಯೇ ಇನ್ನು ಇವರಲ್ಲಿ ವಿರೋಧತ್ವ ಬೇಡವೆಂದು ತನ್ನ ಠೀವಿಯನ್ನೆಲ್ಲ ಬಿಟ್ಟು ಪ್ರಾಯಶಃ ನಮ್ಮ ಸೇವೆಯನ್ನು ಮಾಡಿಕೊಂಡು ಸುಖವಾಗಿ ಬಾಳುವೆ ನಡೆಸುವುದಕ್ಕಾಗಿ ಬಂದಿರುವನೋ ಏನೋ. ಆದುದರಿಂದ—

ಪದ್ಯ: ಅಂತರಂಗವ ತಿಳಿದು । ಪುಂತೆ ತಕ್ಕುದ ಮಾಳ್ಪೆನೆಂದೆನುತ ಸುರಪಾದ್ಯ । ರಂ ತರಿಸಿ ಸಭೆಗೇ ॥ ೩ ॥

ಬಲಿ: ಯಾವುದಕ್ಕೂ ಅವನಲ್ಲಿಯೇ ಮಾತನಾಡಿ ಅವನ ಅಂತರಂಗವನ್ನು ತಿಳಿಯುವ. ಒಂದು ವೇಳೆ ಒಳ್ಳೆಯತನದಿಂದ ಬಂದಿದ್ದರೆ ಒಳ್ಳೆಯ ರೀತಿಯಿಂದಲೇ ನೋಡೋಣ. ಅಲ್ಲ ಏನಾದರೂ ಕುಹಕತನವಿದ್ದರೆ ಅದಕ್ಕೆ ತಕ್ಕ ಮದ್ದನ್ನೇ ಅರೆಯೋಣ. ದೂತರೇ, ತಡಮಾಡದೆ ದೇವೇಂದ್ರಾದಿಗಳನ್ನು ಇಲ್ಲಿಗೆ ಕರೆತನ್ನಿ.

ದೂತ: ಅಪ್ಪಣೆ.

ದೂತರು: ಹೇ ಇಂದ್ರ ಹಾಗೂ ಉಳಿದ ಸುರರೆಲ್ಲರೂ ಕೇಳಿ, ನಮ್ಮ ಮಹಾರಾಜರ ಅಪ್ಪಣೆಯಾಗಿದೆ. ಕೂಡಲೇ ಸಭೆಗೆ ಬರಬೇಕಂತೆ. ಬೇಗಬನ್ನಿ.

ಇಂದ್ರ: (ಪ್ರವೇಶಿಸಿ) ಚಕ್ರವರ್ತಿಗಳಿಗೆ ನಮ್ಮೆಲ್ಲರ ವಂದನೆಗಳು.

ಬಲಿ : ಸುರಪ, ಕೈಮುಗಿದು ಏಕೆ ದೂರ ನಿಂತಿರುವೆ? ಇದೋ ನನ್ನ ಬಳಿಯಲ್ಲಿಯೇ ಇರುವಂತಹ ಈ ಆಸನದಲ್ಲಿ ಆಸೀನನಾಗು.

ಇಂದ್ರ : ನಿಮ್ಮ ಇಚ್ಛೆಯಂತೆ ನಡೆಯುತ್ತೇನೆ.

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಪದ್ಯ : ಬಂದುದೇನೈ ಸುರಪ ದಿವಿಜರ । ವೃಂದ ಕೂಡುತಲೆಮ್ಮೆಡೆಗೆ ಮನ । ಕುಂದದಿರು ದಂಡಿಸಿದೆ ರಣದೊಳ । ಗೆಂದು ಬರಿದೇ ॥ ೧ ॥

ಬಲಿ : ಸುರರಾಜ, ದೇವತೆಗಳನ್ನೆಲ್ಲಾ ಕೂಡಿಸಿಕೊಂಡು ಇಲ್ಲಿಯ ವರೆಗೆ ಬಂದಿರುವಿ ತಾನೆ? ನೀನು ಸುಮ್ಮನೆ ಬರುವವನಲ್ಲ. ಏನು ಬಂದೆ ಹೇಳು. ಈ ಮೊದಲಿನ ಯುದ್ಧದಲ್ಲಿ ನಿನ್ನನ್ನು ಹೊಡೆದು ಸೋಲಿಸಿದವ ನಾನು. ಅದಕ್ಕಾಗಿ ನೀನು ಬೇಸರಿಸಬಾರದು ಹಾಗೂ ನಾಚಲೂ ಬಾರದು. ಏಕೆ ಗೊತ್ತೆ? ಕೇಳು.

ಪದ್ಯ : ಸುರರ ಸಕಲಧಿಕಾರ ವೆಮ್ಮೊಡ । ನಿರುವುದಕೆ ಬೇಸರಿಸಲನ್ಯರೆ । ಹಿರಿಯ ಕಿರಿಯರು ದಿತಿಜರದಿತಿಜ । ರರಿತು ನೋಡೈ ॥ ೨ ॥

ಬಲಿ : ಇಂದ್ರಾ, ನಿನ್ನ ಕೈಯಲ್ಲಿದ್ದಂತಹ ಸ್ವರ್ಗದ ಅಧಿಕಾರವು ಈಗ ನನ್ನ ವಶವಾಗಿದೆ. ಆದರೆ ಸರಿಯಾಗಿ ವಿಚಾರ ಮಾಡಿದರೆ ಈ ಅಧಿಕಾರ ನಿನ್ನಲ್ಲಿದ್ದರೂ ನನ್ನಲ್ಲಿದ್ದರೂ ಒಂದೇ ತಾನೇ? ಏಕೆಂದರೆ ನಾನೇನೂ ಅನ್ಯನಲ್ಲ. ನಿನ್ನ ದೊಡ್ಡ ತಾಯಿಯ ಮಗ. ನಾವು ಅಣ್ಣ ತಮ್ಮಂದಿರಲ್ಲವೇ? ಒಂದು ವೇಳೆ ನಿನ್ನಿಂದ ನಾನು ಸೋತುದಾದರೆ ನನಗೆ ನಾಚಿಕೆ. ನೀನು ನನಗಿಂತ ಚಿಕ್ಕವ ನನ್ನ ತಮ್ಮ. ಅಣ್ಣನಲ್ಲಿ ತಮ್ಮ ಸೋತರೆ ನಾಚಿಕೆಯಿಲ್ಲ. ನೀನೇ ಆಲೋಚಿಸು. ತಮ್ಮಾ, ನೀನು ಇವರನ್ನೆಲ್ಲ ಕೂಡಿಕೊಂಡು ಬಂದ ವಿಷಯ ಹೀಗೆ ಇರಬಹುದೆ?....

ಪದ್ಯ : ಒಲಿಸಿ ನಮ್ಮನು ಬಾಳುವಾಸೆಯೊ । ಮಲೆತು ಕೊಳುಗಳ ಗೈವ ಬಯಕೆಯೊ । ಕಳವಳವ ತೊರೆದಂತರಂಗವ ತಿಳುಹಿಸಯ್ಯಾ ॥ ೩ ॥

ಬಲಿ: ದೇವೇಂದ್ರಾ, ಸಂಬಂಧಿಕರಾದ ನಮ್ಮನ್ನು ಹೊಂದಿಕೊಂಡು ಜೊತೆಯಾಗಿ ಜೀವನ ನಡೆಸುವ ಆಸೆಯೋ? ಅಥವಾ ಸೋಲು ಗೆಲವು ಯುದ್ಧವೀರರಿಗೆ ಇದ್ದದ್ದೆ. ಒಂದು ಸಾರಿ ಸೋತರೇನು? ಪುನಃ ಯುದ್ಧ ಮಾಡಿ ನಮ್ಮನ್ನೆಲ್ಲ ಬಡಿದು ಕಳಕೊಂಡ ಅಧಿಕಾರವನ್ನು ತಿರುಗಿ ಪಡೆಯುವ ಅಭಿಪ್ರಾಯವೋ? ಯಾವುದೇ ಇದ್ದರೂ ನಿನ್ನ ಮನಸ್ಸಿನ ಇಂಗಿತವನ್ನು ಸಂಕೋಚಪಡದೆ ಬಿಚ್ಚು ಹೃದಯದಿಂದ ತಿಳಿಸಯ್ಯ.

ದೇವೇಂದ್ರ: ಬಲಿ ಮಹಾರಾಜರೆ, ನಿಮ್ಮ ಸದ್ಗುಣಕ್ಕೆ ಯಾರಾದರೂ ಮೆಚ್ಚಲೇಬೇಕು. ನಾವು ನಿಮ್ಮಲ್ಲಿ ಯುದ್ಧಮಾಡಿ ಸೋತು ಓಡಿದವರಾದರೂ ನೀವು ತಿರಸ್ಕಾರ ಭಾವವನ್ನು ತೋರಿಸದೆ ಇಷ್ಟು ಗೌರವಕೊಟ್ಟು ಪ್ರಶ್ನಿಸುತ್ತಿರುವಾಗ ಉತ್ತರಿಸುವುದಕ್ಕೆ ಬಹಳ ಸಂತೋಷವಾಗುತ್ತದೆ. ಎಲ್ಲವನ್ನು ತಿಳಿಸುತ್ತೇನೆ— ಕೇಳಿರಿ.

ರಾಗ ಸುರುಟಿ ಏಕತಾಳ

ಪದ್ಯ: ಲಾಲಿಸು ಬಲಿರಾಜಾ। ಕೀರ್ತಿವಿ। ಶಾಲನೆ ರವಿತೇಜಾ ॥ ಖೂಳ ತನದಿ ನಾ।ಹಾಳೆಸಗಿದೆ ತ್ರಿದ।ಶಾಲಯ ನೀನದ।ನಾಳಿದರೇನ್ ಸುಖಾ ॥ ೧ ॥

ದೇವೇಂದ್ರ: ಚಕ್ರವರ್ತಿಗಳೆ, ಸೂರ್ಯದೇವನು ತನ್ನ ತೇಜಸ್ಸನ್ನು ಪ್ರಪಂಚದಲ್ಲೆಲ್ಲಾ ಹಬ್ಬಿಸುವಂತೆ ನೀವು ನಿಮ್ಮ ಕೀರ್ತಿಯನ್ನು ಇಡೀ ಜಗತ್ತಿನಲ್ಲಿಯೇ ಹಬ್ಬಿಸಿರುವಿರಿ. ಪ್ರತ್ಯಕ್ಷ ಭಾನು ತೇಜಸ್ಸಿನಿಂದ ಮೆರೆಯುವಂತಹ ಮಹಾನುಭಾವರೆ ನಿಮ್ಮಂತಹವರು ಈ ಸ್ವರ್ಗದ ಅಧಿಕಾರ ಪಡೆದರೆ ಅದಕ್ಕೆ ನಾವೆಲ್ಲ ಮತ್ಸರಪಡಬಾರದು. ನನಗೆ ಬೇಸರ ನೀವು ಸ್ವರ್ಗವನ್ನು ಆಳುತ್ತಿರುವಿರೆಂದಲ್ಲ; ನೀವು ಅಧಿಕಾರಕ್ಕೆ ಬರುವಾಗ ನನ್ನ ದುರ್ಬುದ್ಧಿಯಿಂದಾಗಿ ಇಲ್ಲಿಯ ಸಂಪತ್ತೆಲ್ಲವು ನೀರು ಪಾಲಾಗಿ ಹೋಯಿತಲ್ಲ. ಸಕಲ ಸಂಪದ್ಭರಿತವಾದ ಸ್ವರ್ಗವು ನಿಮ್ಮ ವಶವಿರುತ್ತಿದ್ದರೆ ಅದಕ್ಕೊಂದು ಶೋಭೆ. ನಿಮಗೆ ಪೂರ್ಣವಾದ ಸುಖವೂ ದೊರೆಯುತ್ತಿತ್ತು. ಈಗ "ಬರಿದಾದ ನಾಕದ ಅಧಿಕಾರಿ ಬಲಿಮಹಾರಾಜರು" ಎಂದು ಲೋಕ ಹೇಳುವ ಹಾಗೆ ನನ್ನಿಂದ ಆಯಿತಲ್ಲ. ಅದಕ್ಕಾಗಿ ತುಂಬ ವ್ಯಥೆಯಾಗುತ್ತಿದೆ.

ಬಲಿ: ಇಂದ್ರ, ನಿಮ್ಮನ್ನು ಸುಮನಸರೆಂದು ಕರೆಯುವರು. ಆ ಹೆಸರು ನೂರಕ್ಕೆ ನೂರು ಸತ್ಯ. ನಿಮ್ಮಂತಹ ಒಳ್ಳೆಯ ಮನಸ್ಸಿನವರು ಪ್ರಪಂಚದಲ್ಲಿ ಯಾರೂ ಇರಲಾರರು. ಸಂಪತ್ತಿಲ್ಲದ ಸ್ವರ್ಗ ನನಗೆ ಸಿಕ್ಕಿದೆ ಎಂದು ನೀನು ವ್ಯಥೆಪಡಬೇಡ. ಆದದ್ದು ಆಗಿ ಹೋಯಿತು. ಇನ್ನು ಏನು ಮಾಡಲು ಸಾಧ್ಯ?

ಇಂದ್ರ: ಬಲಿರಾಜರೆ, ನನ್ನಿದಾದಂತಹ ಈ ದುರವಸ್ಥೆಯನ್ನು ಸರಿ ಪಡಿಸುವುದು ನನ್ನ ಕರ್ತವ್ಯವಲ್ಲವೇ? ಅದಕ್ಕೆ ನಾನು ಸುಮ್ಮನಿರಲಿಲ್ಲ. ಒಂದು ಕೆಲಸ ಮಾಡಿದೆ.

ಬಲಿ: ಅದು ಯಾವುದು ?

ಇಂದ್ರ: ಕೇಳಿರಿ.

ಪದ್ಯ: ಹೊಂದಿ ನಿಮ್ಮಯ ಬಳಿಯಾ । ನಾವಿರೆ | ಕುಂದಪ್ಪುದೆ ಜೀಯಾ ॥ ಸೌಂದರ್ಯದ ನೆಲೆ | ಬೀಡಿಗೆ ಕೊರತೆಯು | ಬಂದುದ ಕಮಲಜ। ಗೆಂದೆವು ದೈನ್ಯದೀ ॥ ೨ ॥

ಇಂದ್ರ: ಸ್ವಾಮಿ, ಹಿರಿಯರಾದ ನಿಮ್ಮನ್ನು ಆಶ್ರಯಿಸಿ ನಾವು ಜೀವನ ಮಾಡಿದರೆ ನಮ್ಮ ಯೋಗ್ಯತೆಗೆ ಧಕ್ಕೆಯೇನೂ ಬರಲಿಕ್ಕಿಲ್ಲ. ನಾವೂ ನೀವೂ ಒಟ್ಟಿಗೆ ಇರುವುದಾದರೂ ಈ ಸ್ವರ್ಗಲೋಕವನ್ನು ನೋಡುವಾಗ ನನಗೆ ಸಹಿಸಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ಮೊದಲಿದ್ದ ಸೌಭಾಗ್ಯದ ಹಿರಿಮೆ ಯೇನು! ಈಗ ಇರುವ ಕಿರಿಮೆಯೇನು! ಇದನ್ನೆಲ್ಲ ನೋಡುವಾಗ ನನಗೆ ಮರುಕವು ಮರುಕಳಿಸುತ್ತಿರುವುದು. ಎಲ್ಲ ಲೋಕಗಳಿಂದಲೂ ಶ್ರೇಷ್ಠವಾದ ಲೋಕವೆಂದು ಖ್ಯಾತಿಗಳಿಸಿರುವ ಈ ಸ್ವರ್ಗದ ಯೋಗ್ಯತೆಯು ಉಳಿಯಬೇಕಾದರೆ ಕಳೆದುಹೋದ ಸಂಪತ್ತನ್ನು ಪುನಃ ಗಳಿಸಲೇ ಬೇಕು. ಅದಕ್ಕಾಗಿ ತುಂಬಾ ಯೋಚಿಸಿದೆ. ಯಾವ ದಾರಿಯೂ ಕಾಣಸದಿರಲು ಸತ್ಯಲೋಕ ವಾಸಿಯಾದ ಬ್ರಹ್ಮದೇವನಲ್ಲಿ ಈ ವಿಷಯವನ್ನು ಹೇಳಿದೆ. ಅದಕ್ಕೆ ಅವರು–

ಪದ್ಯ: ಎನ್ನಿಂದಸದಳವೂ। ಎನಲಾ। ಚಿನ್ಮಯ ನೆಡೆಗಾವೂ॥ ಭಿನ್ನವಿಸಲು ಸುರ। ರಸುರರು ಮಮತೆಯೊ। ಳಿನ್ನಿಹುದೆಂದುದ। ಯಾರ್ಣವ ನುಸುರಿದಾ ॥ ೩ ॥

ದೇವೇಂದ್ರ: "ದೇವೇಂದ್ರಾ, ಸ್ವರ್ಗಕ್ಕೊದಗಿದ ದುಸ್ಥಿತಿಯ ಕುರಿತು ನನ್ನಲ್ಲಿ ಹೇಳಿದರೆ ನನ್ನಿಂದ ಏನು ಮಾಡಲಿಕ್ಕೂ ಸಾಧ್ಯವಿಲ್ಲ. ಸುಮ್ಮನೆ ನೀವು ಗೋಳಿಟ್ಟು ಪ್ರಯೋಜನವಿಲ್ಲ" ಎಂದರು. ಅದನ್ನು ಕೇಳಿದ ನಾವು ಅಲ್ಲಿಗೇ ಬಿಡಲಿಲ್ಲ. ನೇರವಾಗಿ ವೈಕುಂಠಕ್ಕೆ ಹೋದೆವು. ಶ್ರೀಮನ್ನಾರಾಯಣನಲ್ಲಿ ಬೇಡಿಕೊಂಡೆವು. ಅದಕ್ಕೆ ಶ್ರೀಹರಿ ದಯೆತೋರಿ ಒಂದು ವಿಷಯವನ್ನು ತಿಳಿಸಿದರು.

ಪದ್ಯ: ಸಂಧಿಯೆ ಸಗಿ ನಾವೂ। ಒಮ್ಮತ। ದಿಂದಿರೆ ಸಂಪದವೂ॥ ಸಿಂಧುವಿನಿಂದಲಿ। ಪೊಂದುವುದಕ್ಕೆ ನಮ। ಗೊಂದುಪಾಯ ಗೋ। ವಿಂದನು ಪೇಳಿದಾ ॥ ೪ ॥

ದೇವೇಂದ್ರ: ಇಂದ್ರಾದಿ ದೇವತೆಗಳು ಈ ವಿಷಯಕ್ಕೆ ಬೇಸರಿಸುವುದು ಅಗತ್ಯವಿಲ್ಲ. ಕಳೆದು ಹೋದಂತಹ ಸಂಪತ್ತನ್ನು ಪಡೆಯುವುದಕ್ಕೆ ದಾರಿಯನ್ನು ನಾನು ತೋರಿಸಿಕೊಡುತ್ತೇನೆ. ಆದರೆ ನೀವು ಮೊದಲಿನಂತೆ ಇರಬಾರದು. ಸುರರು, ಅಸುರರು ಎನ್ನುವಂತಹ ಭೇದವನ್ನು ಇಟ್ಟುಕೊಳ್ಳದೆ ನಿಮ್ಮೊಳಗೆ ಸಂಧಿಮಾಡಿಕೊಂಡು ಒಮ್ಮತದಿಂದ ಇರಬೇಕು. ಹಾಗೆ ಇರುವಿರಾದರೆ ನಾನು ಹೇಳುವಂತಹ ಉಪಾಯವನ್ನು ಕೇಳಿರೆಂದರು.

ಬಲಿ: ನಾರಾಯಣ ದೇವರು ತಿಳಿಸಿದ ಉಪಾಯವಾದರೂ ಯಾವುದು?

ಇಂದ್ರ: ತಿಳಿಸುತ್ತೇವೆ ಪ್ರಭೋ ಕೇಳಿ.

ವಾರ್ಧಿಕ

ಪದ್ಯ: ಸತ್ವವಂತರು ನೀವು ದಿತಿಯದಿತಿಜರು ಕೂಡಿ। ಪೊತ್ತು ಮಂಧರ ಗಿರಿಯ ನಿರಿಸುತ ಮಹಾಬ್ಧಿಯೊಳು। ಸುತ್ತಿ ವಾಸುಕಿಯಿಂದ ಮಥಿಸಿದರೆ ಸಕಲ ಸದ್ವಸ್ತು ಪುಟ್ಟುವುದದರೊಳೂ॥ ಅರ್ತಿಯಿಂ ಶೋಭಿಸುವುದಾನಾಕ ಪದವಿ ಬಳಿ। ಕುತ್ತಮದ ಸುಧೆ ದೊರಕಲದನುಂಡು ಸಕಲರಿಂ। ದತ್ಯಧಿಕ ಬಲರಾಗಿ ರೆನ್ನಾಜ್ಞೆ ತಿಳುಹೆಲ್ಲರಿಂಗೆಂದು ಕಳುಹೆರ್ದನೂ ॥ ೧ ॥

ಇಂದ್ರ : ಚಕ್ರವರ್ತಿಗಳೇ, ಆ ನಾರಾಯಣ ಸ್ವಾಮಿಯು "ದೇವೇಂದ್ರ ನೀನು ಈಗಲೇ ಬಲಿಚಕ್ರವರ್ತಿಯ ಬಳಿಗೆ ಹೋಗಿ ಸಂಧಿಯನ್ನು ಮಾಡಿಕೊಂಡು ಒಟ್ಟು ಸೇರಿ ಮಂಧರಗಿರಿಯನ್ನು ತಂದು ಸಮುದ್ರದ ಮಧ್ಯದಲ್ಲಿ ಇಟ್ಟು ವಾಸುಕಿಯನ್ನು ನೇಣಾಗಿ ಸುತ್ತಿ ಮಥನ ಮಾಡಬೇಕು. ಆಗ ಕಳೆದು ಹೋದ ಭಾಗ್ಯಗಳೆಲ್ಲವೂ ಪುನಃ ಹುಟ್ಟಿ ಬರುವುವು. ಆ ಸಂಪತ್ತೆಲ್ಲವೂ ಸ್ವರ್ಗದಲ್ಲಿ ಮೆರೆದರೆ ಮೊದಲಿಗಿಂತಲೂ ಹೆಚ್ಚಿನ ಶೋಭೆಯಿಂದ ಸ್ವರ್ಗವು ಮೆರೆಯಲು ಸಾಧ್ಯವಿದೆ. ಅಷ್ಟೇ ಅಲ್ಲ ನೀವು ಎಡೆಬಿಡದೆ ಮಥನ ಮುಂದುವರಿಸಿದರೆ ಕೊನೆಗೆ ಅಮೃತವು ಉದಿಸಿ ಬರುವುವು. ಅದನ್ನು ನೀವೆಲ್ಲರೂ ಕುಡಿದರೆ ಮರಣದ ಭಯವನ್ನೇ ಕಳೆದುಕೊಳ್ಳಲು ಸಾಧ್ಯವಿದೆ. ಇದನ್ನು ಎಲ್ಲಾ ಸುರರಲ್ಲಿಯೂ ಬಲಿರಾಜನೇ ಮೊದಲಾದ ಎಲ್ಲಾ ದಿತಿಜರಲ್ಲಿಯೂ ತಿಳಿಸು" ಎಂದು ಆ ಸ್ವಾಮಿಯು ಅಪ್ಪಣೆ ಮಾಡಿರುವನು. ಹಾಗಾಗಿ ಸುರರ ಮೊತ್ತವನ್ನು ಕೂಡಿಕೊಂಡು ಇಲ್ಲಿಯವರೆಗೆ ಬಂದಿರುವೆನು, ಇನ್ನು ಅದರ ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಬಲಿ: ಸುರಪ, ನಿನ್ನ ಉತ್ತಮವಾದ ಗುಣಕ್ಕೆ ನಾನು ನಿಜಕ್ಕೂ ಮೆಚ್ಚಿದೆ. ಸ್ವರ್ಗದಲ್ಲಿ ಅಧಿಕಾರ ನನ್ನದಿದ್ದರೂ ಇಲ್ಲಿಯ ಯೋಗ್ಯತೆ ಕೆಡಬಾರದೆಂದು ಸೋತವನಾದರೂ ನೀನು ಎಷ್ಟು ಪ್ರಯತ್ನ ಮಾಡಿದೆ. ನಿನ್ನ ಪ್ರಯತ್ನಕ್ಕೆ ನಾನು ಮನತುಂಬಿ ತೃಪ್ತನಾದೆ. ಮುಂದಿನ ಕಾರ್ಯದ ಕುರಿತು ನಮ್ಮವರಲ್ಲಿ ಸಮಾಲೋಚಿಸುತ್ತೇನೆ. ನೀನು ಸ್ವಲ್ಪ ವಿಶ್ರಾಂತಿ ಪಡೆದುಕೊಳ್ಳು.

ಇಂದ್ರ : ಆಗಲಿ.

ರಾಗ ಕಾಂಭೋದಿ ಝಂಪೆತಾಳ

ಪದ್ಯ : ಕೇಳಿ ಬಲಿಯುಬ್ಬಿದನು ಬಲಿಶಂಬರಾದ್ಯಖಿಳ। ರಾಲೋಚಿಸುತಲಿ ತಮ್ಮೊಳಗೇ॥ ವೇಳೆಗಳೆಯದೆ ಕಾರ್ಯವೆಸಗಿ ಸುಧೆಯನ್ನುಂಡು। ಮೇಲೆನಿಪೆ ತ್ರೈಜಗದೊಳೆನುತಾ ॥ ೧ ॥

ಬಲಿ : ಭಲರೇ, ಕನಸಿನಲ್ಲೂ ಯೋಚಿಸದ ವಿಷಯವನ್ನು ನಮ್ಮ ಸುರಪನು ತಿಳಿಸಿದನಲ್ಲಾ? ದಿತಿಜರಾದ ನಮಗಿದ್ದ ಬಲು ದೊಡ್ಡ ಕೊರತೆ

ಯೆಂದರೆ ಮರಣ ತಪ್ಪಿಸುವ ಹವಣ ಸಿಕ್ಕದಿರುವುದು. ಅದನ್ನೀ ದಕ್ಕಿಸಿ ಕೊಳ್ಳುವ ಸುಸಂಧಿ ಈಗ ಒದಗಿರುವುದು. ಇನ್ನೇಕೆ ತಡ? ನಮ್ಮವರಾದ ಶಂಭರಾದಿ ವೀರರೇ ಬೇಗ ಏಳಿರಿ, ದೇವತೆಗಳನ್ನು ಕೂಡಿಕೊಂಡು ಕಡಲನ್ನು ಮಥಿಸಿ ದೊರಕಿದ ಸುವಸ್ತುಗಳನ್ನು ಪಡೆದು, ಜೊತೆಗೆ ಅಮೃತವನ್ನೂ ಉಂಡು ಮರಣ ಭೀತಿಯನ್ನು ತಪ್ಪಿಸಿ ಶ್ರೇಷ್ಠವಾದ ಈ ಅಮರಾವತಿಯಲ್ಲಿ ಸುಖವಾಗಿ ಬಾಳುವೆ ನಡೆಸುವ. ಏಳಿ.

ಪದ್ಯ : ತ್ರಿದಶರಿಗಿಮ್ಮಡಿಯೊಳಧಿಕವಾವಿರುವೆ ವಿನ್ನದಕೆ ಸಮಭಾ ಗವೇತಹುದೊ॥ ಬದಲು ಮಾತೇನೆರಡು ಭಾಗವೆಮಗದರರ್ಧ। ವದು ನಿರ್ಜ ರರು ಕೊಳುವುದೆಂದಾ ॥ ೧ ॥

ಶಂಬರ : ಮಹಾಪ್ರಭೋ, ನೀವು ಹೇಳಿದಂತೆ ಕಾರ್ಯವನ್ನು ಎಸಗ ಬಹುದು. ಆದರೆ ನನ್ನದೊಂದು ಸೂಚನೆಯಿದೆ. ಸಮುದ್ರ ಮಥನ ಮಾಡಿದರೆ ಅದರಲ್ಲಿ ದೊರಕಿದಂತಹ ಸಂಪತ್ತು ಯಾರು ಯಾರಿಗೆ ಎಷ್ಟೆಷ್ಟು ಎಂದು ಮೊದಲೇ ನಿರ್ಣಯವನ್ನು ಮಾಡಿಕೊಳ್ಳಬೇಕು. ಏಕೆಂದರೆ ಈ ಮಥನದ ಕೆಲಸ ಬಹಳ ಘನವಾದುದು. ಅದಕ್ಕಾಗಿಯೇ ದೇವೇಂದ್ರ ನಮ್ಮ ಮರೆಯನ್ನು ಸೇರಿದುದು. ನಮ್ಮವರಲ್ಲಿ ಕೆಲವರೆಲ್ಲ ಸರಿಪಾಲು ಸಿಗಬೇ ಕೆಂದೂ, ಮತ್ತೆ ಕೆಲವರು ಪೂರ್ಣ ನಮಗೇ ಸಿಗಬೇಕೆಂದೂ ಸೂಚಿಸುತ್ತಿರು ವರು. ಆದರೆ ಇದು ಯಾವುದೂ ಸರಿಯಲ್ಲ. ಸರಿಯಾದ ಕ್ರಮವೆಂದರೆ ಹೀಗಾಗಬೇಕು. ನಾವು ಒಟ್ಟು ತೊಂಭತ್ತೊಂಭತ್ತು ಕೋಟಿ ಇದ್ದೇವೆ. ಇದರಲ್ಲಿ ದೇವತೆಗಳು ಮೂವತ್ತಮೂರು ಕೋಟಿ ಇರುವರು. ಹಾಗಾಗಿ ದೊರಕಿದ ಸಂಪತ್ತನ್ನು ಸರಿಯಾಗಿ ಮೂರು ಪಾಲು ಮಾಡಬೇಕು. ಅದರಲ್ಲಿ ಎರಡು ಪಾಲು ನಮಗೆ, ಒಂದು ಪಾಲು ದೇವತೆಗಳಿಗೆ ಸಲ್ಲಬೇಕು. ಇದಕ್ಕೆ ಒಪ್ಪುವುದಾದರೆ ಮಾತ್ರ, ನಾವು ಕಾರ್ಯಕ್ಕೆ ತೊಡಗುವ. ಇದನ್ನು ದೇವೇಂ ದ್ರನಲ್ಲಿ ಕೇಳಿ ಮೊದಲೇ ನಿಶ್ಚಯಿಸಿಕೊಳ್ಳಿ. ಆಗದೆ?

ಪದ್ಯ : ಈ ತೆರದೊಳೊಂದೊಂದು ಮಾತ ಪೇಳಲು ದಿವಿಜ । ನಾಥ ನಡಕೊಪ್ಪಿ ಭಾಷೆಯನೂ॥ ತಾ ತಳುವದಿತ್ತು ನಂಬಿಸುತ ಡಂಗುರ ಹೊಯ್ಸಿ। ಖ್ಯಾತರುಭಯರು ಪೊರಟರಾಗಾ॥

ಬಲಿ : ಶಂಬರ, ನಿನ್ನ ಸೂಚನೆಯೇ ಸರಿಯಾದುದು. ಈ ವಿಷಯವನ್ನು ದೇವೇಂದ್ರನಲ್ಲಿ ತಿಳಿಸಿ ನಿರ್ಣಯಿಸಿಕೊಳ್ಳುವ. ಯಾರಲ್ಲಿ! ಇಂದ್ರನನ್ನು ಬರಲಿಕ್ಕೆ ಹೇಳಿ.

ಇಂದ್ರ : ಚಕ್ರವರ್ತಿಗಳೇ ಏಕೆ ಕರೆದಿರಿ?

ಬಲಿ : ಸುರಪ, ನೀನು ತಿಳಿಸಿದ ವಿಷಯವನ್ನು ನಮ್ಮವರಿಗೆಲ್ಲ ನಾನು ಹೇಳಿದೆ. ಅದಕ್ಕೆ ನಮ್ಮವರೆಲ್ಲ ಒಂದು ಸೂಚನೆ ಕೊಡುತ್ತಿರುವರು. ನಿಮ್ಮಿಂದ ನಾವು ಸಂಖ್ಯೆಯಲ್ಲಿ ಹೆಚ್ಚು ಇರುವುದರಿಂದ ದೊರಕಿದ ಸಂಪತ್ತಿನಲ್ಲಿ ನಮಗೆ ಒಂದು ಪಾಲು ಹೆಚ್ಚು ಸಿಗಬೇಕೆಂದು ಹೇಳುತ್ತಿರುವರು. ಅಂದರೆ ಕ್ರಮ ಹೀಗೆ : ಬಂದ ಸಂಪತ್ತೆಲ್ಲವನ್ನು ಮೂರು ಸಮಪಾಲು ಮಾಡಿ ಅದರಲ್ಲಿ ಎರಡು ಪಾಲು ನಮಗೆ, ಒಂದು ಪಾಲು ನಿಮಗೆ. ಇದಕ್ಕೆ ನಿಮ್ಮ ಒಪ್ಪಿಗೆ ಇರುವುದಾದರೆ ನಮ್ಮವರು ಬರುತ್ತಾರಂತೆ. ಹೇಗೆ ಇದಕ್ಕೆ ನಿನ್ನ ಮತ್ತು ನಿಮ್ಮವರೆಲ್ಲರ ಒಪ್ಪಿಗೆ ಇದೆಯೇ? ತಿಳಿಸು.

ಇಂದ್ರ : ಬಲಿ ಮಹಾರಾಜಾ, ಈ ವಿಷಯಕ್ಕೆ ಯಾರಲ್ಲಿಯೂ ಕೇಳಬೇಕಾದುದಿಲ್ಲ. ಏಕೆಂದರೆ ಇದು ಸರಿಯಾದ ಸೂಚನೆ. ನಮ್ಮಿಂದ ಸಂಖ್ಯೆಯಲ್ಲಿ ಹೆಚ್ಚು ಇರುವ ನಿಮಗೆ, ನಿಮ್ಮ ದುಡಿಮೆಗೆ ತಕ್ಕ ಫಲ ಸಿಗಬೇಕಾದುದು ಅಗತ್ಯ. ಆದುದರಿಂದ ನಾವು ಸುಮ್ಮನೆ ಮಾತನಾಡಿ ಸಮಯ ಕಳೆಯುವುದು ಬೇಡ. ಬಂದ ಸಂಪತ್ತಿನಲ್ಲಿ ಎರಡು ಪಾಲು ನಿಮಗೆ ಖಂಡಿತ ನಾನು ಬಿಟ್ಟು ಬಿಡುತ್ತೇನೆ.

ಬಲಿ : ಸರಿತಾನೆ? ಹಾಗಾದರೆ ಹೊರಡುವ ಬನ್ನಿರಿ. ಎಲ್ಲಿ ನಮ್ಮವರೆಲ್ಲ ಹೋಗೋಣ.

ರಾಗ ಭೈರವಿ ತ್ರಿವುಡೆತಾಳ

ಪದ್ಯ: ಬಂದರಾಗಾ| ಗಿರಿಯೆಡೆ। ಗೆಂದು ಬೇಗಾ ಮಂದರಾಚಲ ಕೀಳುತೊಯ್ಯುವ|ದೆಂದು ತಮ್ಮೊಡನಾಡುತಾ॥ ಮುಂದೆ ಬರಲು ಮಹಾದ್ರಿ ಶೋಭಿಸು| ವಂದವಂ ನೆರೆ ನೋಡುತಾ॥ ಕುಂದದೊಮ್ಮತದಿಂ ಸುರಾಸುರ|

ವೃಂದ ಕೈಯಂ ನೀಡುತಾ॥ ಸಿಂಧುವಿನೊಳಿರಿಸುವೆವೆನುತ ಭರದಿಂದ ಶೈಲವ ಪೊತ್ತು ಕೊಳುತಾ॥ ಬಂದರಾ॥

ಬಲಿ: ಆದೀತು, ಎಲ್ಲರೂ ಮಂದರಾಚಲದೆಡೆಗೆ ಸಾಗೋಣ ಬನ್ನಿ. ಇದೋ ಇದೋ ಮಂದರ ಪರ್ವತವು ಸಮೀಪದಲ್ಲಿಯೇ ಕಾಣಿಸುತ್ತಿದೆ. ಇದರ ಶೋಭೆಯನ್ನು ಕಂಡಷ್ಟೂ ಸಾಕೆನಿಸುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಇದರ ಚಂದವನ್ನು ಕಾಣುತ್ತಾ ಕಾಲ ಕಳೆಯುವುದಕ್ಕೆ ಸಮಯವಿಲ್ಲ. ಎಲ್ಲರೂ ಹೊತ್ತುಕೊಳ್ಳಿರಿ. ಬೇಗನೆ ಸಮುದ್ರದೆಡೆಗೆ ಕೊಂಡು ಹೋಗುವ.

ಪದ್ಯ: ಅನಲಾರದೆ ಭಾರ ಕೆಲಬರು। ಪ್ರಾಣಗುಂದುತ ಕಡೆಯಲೀ। ಪ್ರಾಣಮಾತ್ರದೊಳುಳಿದು ಬಹುಜನ। ಮಾಣದುರುಳುತಲಡಿಯಲೀ॥ ಗೋಣ ಮುರಿವುತ ಹಲವು ಸುಭಟರು ಕಾಣದಿರಲಿಕ್ಕಡೆಯಲಿ॥ ದೀನ ರಕ್ಷಕ ಸಕಲ ಕರ್ತ ಪುರಾಣ ಪುರುಷನೆ ಪಾಲಿಸೆನುತಲಿ॥ ಬಂದರಾಗಾ॥

ಇಂದ್ರ: ಆಹಾ, ಇದೇನು ಅವಸ್ಥೆ! ಗಿರಿಯನ್ನು ತಲೆಯಲ್ಲಿ ಹೊತ್ತುಕೊಂಡು ಹೋಗುವುದೆಂದು ನಾವೆಲ್ಲ ಪ್ರಯತ್ನಿಸಿದರೆ ಕೆಲವರು ತನ್ನಷ್ಟಕ್ಕೆ ಸ್ಮೃತಿತಪ್ಪಿ ಧರೆಯಲ್ಲಿ ಉರುಳುತ್ತಿರುವರು. ಕೆಲವರು ಕೊರಳು ಮುರಿಯುತೆಂದು ಬೊಬ್ಬೆ ಹಾಕುತ್ತಿರುವರು. ಈ ರೀತಿ ನಮ್ಮವರ ಅವಸ್ಥೆಯಾದರೆ ಪರ್ವತವನ್ನು ಕೊಂಡುಹೋಗುವುದಾದರೂ ಹೇಗೆ? ಸಮುದ್ರವನ್ನು ಮಥಿಸುವುದಾದರೂ ಹೇಗೆ? ಓ, ದೀನರಕ್ಷಕ, ಮಧುಸೂಧನಾ, ಸರ್ವೋತ್ತಮನೆ ನಿನ್ನ ಸೂಚನೆಯಂತೆ ತಾನೆ ನಾವು ಈ ಕಾರ್ಯಕ್ಕಿಳಿದುದು. ನೀನೇ ಕೈಬಿಡುತ್ತಿಯಾದರೆ ನಾವು ಕೆಲಸದಲ್ಲಿ ಉತ್ತೀರ್ಣರಾಗಲು ಸಾಧ್ಯವಿಲ್ಲ. ಸ್ವಾಮೀ, ಅನಾಥ ರಕ್ಷಕನೆ, ನಮ್ಮ ಕೈಬಿಡಬೇಡ, ಕಾಪಾಡು ಸ್ವಾಮೀ, ಕಾಪಾಡು.

ಪದ್ಯ: ಮೊರೆಯಿಡುವ ಬಲು ತೆರದಿ ನುತಿಸಲು। ಹರಿಯು ಗರುಡನ ನೇರುತಾ॥ ಪರಿಹರಿಪೆ ಭಯವೆನುತಲಲ್ಲಿಗೆ। ತ್ವರಿತದಿಂದಲಿ ಸಾರುತಾ॥ ಕರುಣಿಸುತಲಭಯವನು ಸುರರ ಸುರರೊಳು ಕೃಪೆಯಂ ಬೀರುತಾ॥ ಗಿರಿಯನೆತ್ತುತ ಖಗನ ಬೆನ್ನನೊಳಿರಿಸು ತೊಯ್ದಾ ಶರಧಿಗಿಳುಹುತಾ॥ ಬಂದರಾಗಾ ॥

ವಿಷು : ನಾನು ದೇವೇಂದ್ರನಿಗೆ ಕೊಟ್ಟ ಸೂಚನೆಯಂತೆ ಅತನು ಕಾರ್ಯವನ್ನು ಮುಂದುವರಿಸುತ್ತಿದ್ದಾನೆ. ಸುರಾಸುರರು ಒಟ್ಟಾಗಿ ಮಂಧರ ಪರ್ವತವನ್ನು ಹೊತ್ತು ಸಮುದ್ರದ ಬಳಿಗೆ ತರುವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಈಗ ಪರ್ವತದ ಭಾರವನ್ನು ಹೊರಲು ಸಾಧ್ಯವಿಲ್ಲದೆ ಅಯ್ಯೋ ಏನು ಮಾಡೋಣ ಎಂದು ಬೊಬ್ಬಿಡುತ್ತಿದ್ದಾರೆ. ಸುರಪನಿಗೆ ಈಗ ಸಹಿಸಲಾರದ ದುಃಖವಾಗಿದೆ. ಶ್ರೀ ಹರಿ ನಿನ್ನನ್ನೇ ನಂಬಿ ನಿನ್ನ ಸೂಚನೆಯಂತೆ ನಾನೀ ಕಾರ್ಯಕ್ಕೆ ಇಳಿದೆ. ನೀನೆ ಕೈ ಬಿಡುತ್ತಿಯಾದರೆ ಇನ್ನು ಈ ಕೆಲಸವನ್ನು ನಮ್ಮಿಂದ ಮುಂದುವರಿಸಲು ಸಾಧ್ಯವಿಲ್ಲ. ಪ್ರಭು! ಕಾಪಾಡೆಂದು ಸ್ತುತಿಸುತ್ತಿರುವನು. ಈ ಸಂದರ್ಭದಲ್ಲಿ ನನ್ನ ಭಕ್ತರಾದ ದೇವತೆಗಳನ್ನು ಕಾಪಾಡಲೇಬೇಕು. ಅದಕ್ಕಾಗಿ ಗುರುಡನನ್ನೇರಿ ಅಲ್ಲಿಯ ವರೆಗೆ ಹೋಗುತ್ತೇನೆ. ಓಹೋ, ಇದೇನು ದೇವೇಂದ್ರ, ಹಾಗೂ ಬಲಿಚಕ್ರವರ್ತಿ ಇನ್ನುಳಿದ ದೇವತೆಗಳೆ, ರಾಕ್ಷಸರೆ, ಎಲ್ಲರೂ ದೂರ ಸರಿಯಿರಿ. ಗಿರಿಯನ್ನು ಹೊತ್ತು ನೀವು ಬಳಲಿರುವಿರಿ. ಇನ್ನು ನಮ್ಮ ಗರುಡನಿದ್ದಾನೆ. ಅವನ ಬೆನ್ನಿಗೆ ಇಡಿರಿ. ಅವನೇ ಸಮುದ್ರದವರೆಗೆ ಕೊಂಡುಹೋಗುತ್ತಾನೆ.

ವಾರ್ಧಿಕ

ಪದ್ಯ: ಗಿರಿಯಲುತಿರೆ ಪಿಡಿದು ಶ್ರೀವರಂ ವಾಸುಕಿಯ। ಬಿಗಿಸಿಸುತ್ತುತ ಮಥಿಸುವನಿತರೊಳು ಕೆಳಗಿಳಿಯೆ। ಹರಿಪೇಳ್ದ ವಿಘ್ನರಾಜನ ಸ್ತುತಿಸದಿನಿತಾದುದೆನಲು ಭಕ್ತಿಯೊಳೆಲ್ಲರೂ॥ ಕರಿಮುಖನ ಪೂಜಿಸುತ ತ್ರೈಮೂರ್ತಿಗಳ ಸ್ಮರಿಸೇ ಮೆರೆದರಾ ನೋಟಕರ ತೆರದಿ ತನ್ನಂಶದಿಂ। ಹರಿತಳೆದು ಕೂರ್ಮನಾಕೃತಿ ಮುಳುಗಿ ಬೆನ್ನಿನೊಳು ಗಿರಿಪೊತ್ತು ನಿಂದಿರ್ದನೂ ॥ ೧ ॥

ವಿಷ್ಣು: ಸುರಾಸುರರೆ ಹೇಗೂ ಪಕ್ಷಿರಾಜನ ಸಹಾಯದಿಂದ ನಿಮ್ಮ ಪರ್ವತ ಸಾಗಿಸುವ ಕೆಲಸ ಸಾಂಗವಾಗಿ ನೆರವೇರಿತು ತಾನೆ? ಸಮುದ್ರ ಮಥನ ಮಾಡುವುದಕ್ಕಾಗಿ ನೇಣು ಅಗತ್ಯ. ವಾಸುಕಿಗೆ ಬರಲು ಆಜ್ಞೆ ಮಾಡಿದ್ದೇನೆ. ನೋಡಿ ಬರುತ್ತಾ ಇದ್ದಾನೆ. ಅವನನ್ನು ಗಿರಿಗೆ ಸುತ್ತಿ ಮಥಿಸಲು ಪ್ರಾರಂಭಿಸಿರಿ. ಆಹಾ! ಇದೇನು ಪರ್ವತವು ನೀರಿನ ಅಡಿಗೆ ಇಳಿಯುತ್ತಿರುವುದೇ ಹಾ।

ತಿಳಿಯಿತು. ಇದು ಗಣಪತಿಯ ಮಹಿಮೆ. ಅವನನ್ನು ನಾವು ಮರೆತದ್ದು ತಪ್ಪಾಯಿತು. ಎಲ್ಲರೂ ಗಜಮುಖನನ್ನು ನೆನೆಯಿರಿ. ಸರಿ, ರಾಕ್ಷಸರೂ ದೇವತೆಗಳೂ ಗಣಪತಿ ಸ್ತೋತ್ರ ಮಾಡುತ್ತಿದ್ದಾರೆ. ಆದರೆ ಇಷ್ಟರಲ್ಲಿ ಪರ್ವತ ನೆಟ್ಟಗೆ ನಿಲ್ಲಲಾರದು. ಇದರ ಅಡಿಗಟ್ಟು ಗಟ್ಟಿಯಾಗಿ ಗಿರಿಯು ಕೆಳಗೆ ಹೋಗದಂತೆ ನಾನೇ ಕೂರ್ಮನಾಗಿ ಇದರ ಅಡಿಗೆ ಆಧಾರವಾಗಿ ನಿಲ್ಲುತ್ತೇನೆ, ನೋಡೋಣ.

ಬಲಿ: ಶ್ರೀ ಹರಿಯೇ, ನಿನ್ನಲ್ಲಿ ನಮ್ಮವರ ಪರವಾಗಿ ಒಂದು ಸೂಚನೆ ಇದೆ. ಮಥನ ಮಾಡುವುದಕ್ಕಾಗಿ ಎಲ್ಲರೂ ಸನ್ನದ್ಧರಾಗಿದ್ದಾರೆ. ಆದರೆ ವಾಸುಕಿಯ ತಲೆಯ ಭಾಗವನ್ನು ದೇವತೆಗಳು ಹಿಡಿದಿರುವರು. ಇದು ನಮ್ಮವರಿಗೆ ಸರಿಯಾಗಿ ತೋರುವುದಿಲ್ಲ. ಏಕೆಂದರೆ ನಾವು ಹಿರಿಯರು, ದೇವತೆಗಳು ಕಿರಿಯರು. ಇಡೀ ದೇಹದಲ್ಲಿ ಶಿರಸ್ಸು ಪ್ರಧಾನವಾದ ಭಾಗವಲ್ಲವೆ? ಹಾಗಾಗಿ ಉತ್ತಮವಾದ ಭಾಗವು ಹಿರಿಯರಾದ ನಮ್ಮವರಿಗೆ ಹಿಡಿಯುವುದಕ್ಕಾಗಿ ಬಿಡಬೇಕು. ಇದು ನ್ಯಾಯವಲ್ಲವೆ? ನೀನೇ ವಿಮರ್ಶೆ ಮಾಡಿ ನೋಡು.

ವಿಷ್ಣು: ಸರಿ! ಬಲಿ ಚಕ್ರವರ್ತಿ. ನಿಮ್ಮವರ ಅಭಿಪ್ರಾಯವೇ ಸರಿ. ಹಿರಿಯರಾದ ನೀವೇ ಹಿರಿ ಭಾಗವಾದ ಸರ್ಪನ ತಲೆಯನ್ನು ಹಿಡಿಯಬೇಕು. ದೇವೇಂದ್ರ, ಯಾರಲ್ಲಿ? ದೇವತೆಗಳು ನೀವೆಲ್ಲ ತಲೆಯನ್ನು ಬಿಡಿರಿ. ಬಾಲವನ್ನು ಹಿಡಿಯಿರಿ.

ಇಂದ್ರ: ಪ್ರಭೋ ನಿಮ್ಮ ಅಪ್ಪಣೆಯಂತೆ ತಲೆಯನ್ನು ಬಿಟ್ಟು ನಾನೂ ನಮ್ಮವರೂ ಬಾಲದ ಭಾಗವನ್ನು ಹಿಡಿದಿದ್ದೇವೆ. ರಾಕ್ಷಸರು ತಲೆಯ ಭಾಗದಲ್ಲಿ ಹಿಡಿದಿದ್ದಾರೆ. ನಾವು ಒಂದಾಗಿ ಮಥನಕ್ಕೆ ತೊಡಗಿದ್ದೇವೆ. ಸ್ವಾಮಿ, ಆದರೆ ವಾಸುಕಿಯು ಕರಾಳವಾದ ವಿಷವನ್ನು ಹೊರಹೊಮ್ಮಿಸುತ್ತಿದ್ದಾನೆ. ಈ ವಿಷ ಜ್ವಾಲೆಯನ್ನು ನಮಗೆಲ್ಲ ಸಹಿಸಲಿಕ್ಕೆ ಸಾಧ್ಯವಿಲ್ಲವಾಗಿದೆ. ರಾಕ್ಷಸರು, ದೇವತೆಗಳು ಎಲ್ಲರೂ ಕಂಗಾಲಾಗಿದ್ದಾರೆ. ಪ್ರಭೋ ಏನು ಮಾಡೋಣ?

ವಿಷ್ಣು: ಇಂದ್ರ, ನೀವ್ಯಾರೂ ಗಡಿಬಿಡಿಯಾಗಬೇಡಿರಿ. ನಿಮ್ಮ ಗಲಭೆಯನ್ನು ಕೇಳಿದಂತೆ ಸದಾಶಿವ ದೇವರೂ ವಾಸುಕಿಯ ಹೆಡೆಯಿಂದ ಹೊರ ಹೊಮ್ಮಿದ ವಿಷವನ್ನು ಪಾನಮಾಡಿದರು. ಆ ವಿಷವು ಶಿವನ ಉದರಪ್ರವೇಶ ಮಾಡದಂತೆ ಗೌರೀದೇವಿಯೇ ಕೊರಳಲ್ಲಿ ಗಟ್ಟಿಯಾಗಿ ಹಿಡಿದುದರಿಂದ ಅದು ಶಿವನ ಕೊರಳಲ್ಲಿಯೇ ನಿಂತಿದೆ. ಅದೋ ಶಿವನ ಕೊರಳೇ ನೀಲವಾಗಿ ಕಾಣಿಸುತ್ತಿದೆ. ಹಾಗಾಗಿ ಈ ಶಿವದೇವನಿಗೆ ನೀಲಕಂಠನೆನ್ನುವ ಒಂದು ಹೆಸರಾಯಿತು. ಇನ್ನು ತಡಮಾಡಬೇಡಿ! ಮಥನಕ್ಕೆ ಪ್ರಾರಂಭಿಸಿರಿ. ಸಿಕ್ಕಿದ ಸೊತ್ತುಗಳನ್ನು ಅವರವರೇ ಇಟ್ಟುಕೊಳ್ಳಿರಿ. ಕೊನೆಗೆ ನಾನೇ ಹಂಚಿಕೊಡುತ್ತೇನೆ.

ಬಲಿ: ಕಮಲಾಕ್ಷಾ, ಒಮ್ಮೆ ಒದಗಿದ ದುರಂತವು ಪರಮೇಶ್ವರ ದೇವರಿಂದ ದೂರವಾಯ್ತು. ಆದರೆ ಇನ್ನು ಮಥನಕ್ಕೆ ನಾವೇ ಮುಂದಾಗುತ್ತೇವೆ ಎಂದು ವಾಸುಕಿಯ ತಲೆ ಬಾಲ ಹಿಡಿದು ಎಳೆದರೆ ಗಿರಿಯೇ ಅಲ್ಲಾಡುವುದಿಲ್ಲ ನಾವೇನು ಮಾಡಲಿ?

ರಾಗ ಭೈರವಿ ಝಂಪೆತಾಳ

ಪದ್ಯ: ಹರಿಯುವರ ನಿಲಿಸಿ ಉರ। ಗನ ಬಾಲ ಪಿಡಿಯುದ್ವಯ। ಕರದಿ ಪಿಡಿದೋರುವನೆ। ಶರಧಿಯಂ ಮಥಿಸೇ ॥ ೧ ॥

ವಿಷ್ಣು: ದೇವಾಸುರರೆ, ನೀವೆಲ್ಲ ದೂರ ಸರಿಯಿರಿ. ಹೆಡೆಯನ್ನೂ ಬಾಲವನ್ನೂ ಹಿಡಿದು ನಾನು ಒಂದುಕ್ಷಣ ಗಿರಿಯನ್ನು ಚಲಿಸುವಂತೆ ಮಾಡುತ್ತೇನೆ ನೋಡಿ. ನಾನೊಬ್ಬನೇ ಸ್ವಲ್ಪ ಹೊತ್ತು ಮಥಿಸುವಷ್ಟರಲ್ಲಿಯೇ ಕಾಮಧೇನು ಮೇಲಕ್ಕೆ ಬಂತು. ಇದನ್ನು ನಮಗೆ ನಮಗೆ ಎಂದು ನೀವು ಯಾರೂ ಜಗಳಾಡುವುದು ಬೇಡ. ಇದು ನಮಗೆ ಯಾರಿಗೂ ಬೇಡ. ಲೋಕೋಪಕಾರಿಗಳಾದ ಋಷಿಗಳಿಗೆ ಕೊಡುವ. ಇನ್ನು ನಾನು ಬಿಟ್ಟೆ. ನೀವೇ ಮಥಿಸಿರಿ.

ರಾಗ ಸೌರಾಷ್ಟ್ರ ತ್ರಿವುಡೆತಾಳ

ಪದ್ಯ: ಸೃಷ್ಟಿಕರ್ತನ ರಚನೆಯಲಿ ಬಲು। ಶ್ರೇಷ್ಠ ಬಲಯುತ ವಾಲಿ ನಿರತವು॥ ನಿಷ್ಠೆಯನ್ನಾಚರಿಪ ಬಲು ಸಂ। ತುಷ್ಟಿಯಿಂದಾ ॥ ೧ ॥

ವಾಲಿ : ಜಯ ನಮೋ ಸರ್ವೇಶ್ವರ, ಕಾಪಾಡು. ವಿಶಾಲವಾದ ಬ್ರಹ್ಮ ಸೃಷ್ಟಿಯಲ್ಲಿ ವೀರರೂ, ಭುಜ ಬಲದಲ್ಲಿ ಶ್ರೇಷ್ಠತೆ ಪಡೆದವರೂ, ತುಂಬಾ ಮಂದಿ ಇರಬಹುದು. ಆದರೆ ಬ್ರಹ್ಮದೇವನ ಸೃಷ್ಟಿಯಲ್ಲಿಯೇ ಶ್ರೇಷ್ಠ ಬಲಯುತನೆಂದು ಪ್ರಸಿದ್ಧಿ ಪಡೆದವನಿದ್ದರೆ ಈ ವರ್ತಮಾನ ಕಾಲದಲ್ಲಿ ಈ ವಾಲಿ ಎಂದು ಸರ್ವರೂ ಕೊಂಡಾಡುತ್ತಿದ್ದಾರೆ. ಆದರೆ ಕೆಲವರೆಲ್ಲ ನಮ್ಮನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದಾರೆ. ವಾನರರು ಸಂಸ್ಕಾರ ಹೀನರು, ಕಾಡಲ್ಲಿ ವಾಸಮಾಡುವವರು, ಮರದಿಂದ ಮರಕ್ಕೆ ಲಂಘಿಸುವವರು ಕೋತಿಗಳು ಎಂದು ಹೀಯಾಳಿಸುತ್ತಿದ್ದಾರೆ. ಜನರ ಈ ರೀತಿಯ ದುರ್ಭಾವನೆಯನ್ನು ತೊಲಗಿಸಬೇಕೆಂದು ನನಗೆ ಬುದ್ಧಿ ತಿಳಿದಂದಿನಿಂದ ಅದಕ್ಕೂ ಹೆಚ್ಚಾಗಿ ಈ ಕಿಷ್ಕಿಂಧೆಯ ಪಾರುಪತ್ಯ ನನ್ನ ಕೈಗೆ ದೊರೆತಂದಿನಿಂದ ನಮ್ಮ ಸಮಾಜದ ಕಲ್ಯಾಣಕ್ಕಾಗಿ ದುಡಿಯುತ್ತಿದ್ದೇನೆ. ನಮ್ಮವರಿಗೆಲ್ಲ ಆಗಾಗ ಧರ್ಮದ, ನೀತಿಯ, ನ್ಯಾಯದ ಮಾರ್ಗವನ್ನು ಬೋಧಿಸುತ್ತಿದ್ದೇನೆ. ಲೋಕದಲ್ಲಿ ಇತರರಿಗೆ ಬೋಧಿಸುವವರು ಬಹಳ ಜನ ಇದ್ದಾರೆ. ಇನ್ನೊಬ್ಬರಿಗೆ ಹಾಗೆ ನಡಿ, ಹೀಗೆ ನಡಿ ಎಂದು ಹೇಳುವವರು ಹೆಚ್ಚು. ಸ್ವತಃ ತನ್ನ ನಡತೆಯನ್ನು ತಿದ್ದಿಕೊಂಡು ನಡೆಯುವವರು ವಿರಳ. ಆದರೆ ನನ್ನ ಕ್ರಮ ಮಾತ್ರ ಹಾಗಲ್ಲ. ನನ್ನ ದೈನಂದಿನ ನಡೆ, ನುಡಿ, ಆಚಾರ ವಿಚಾರಗಳೇ ಲೋಕಕ್ಕೆ ಮಾರ್ಗದರ್ಶಕವಾಗಿರಬೇಕು. ನನ್ನ ಕ್ರಮವನ್ನು ನೋಡಿಯೇ ನಮ್ಮವರು ತಿದ್ದಿ ಶುದ್ಧರಾಗಬೇಕು. ಅದಕ್ಕಾಗಿ ಸದಾ ನಿಷ್ಠೆಯ ಜೀವನವನ್ನು ನಡೆಸುತ್ತಿದ್ದೇನೆ. ನನ್ನ ನಿಷ್ಠೆ ಎಲ್ಲಿಂದ ಪ್ರಾರಂಭವಾಗುತ್ತದೆ ಗೊತ್ತೆ?

ಪದ್ಯ : ನಿದ್ದೆಯನು ತೊರೆದುದಯ ಕಾಲದೊ। ಳಿದ್ದು ದಿನ ದಿನ ತೆರಳಿ
ನಾಲ್ಕು ಸ । ಮುದ್ರ ಮೀಯುವ ತೆರದಿ ಪೊರಟನು। ಸಿದ್ಧನಾಗೀ॥

ವಾಲಿ : ಸುಖ ನಿದ್ರೆಯಿಂದ ಎದ್ದಂತಹ ನಾನು ಬೇರಾವ ಕಾರ್ಯಕ್ಕೂ ತೊಡಗುವ ಮುನ್ನ ಉದಯಕಾಲದಲ್ಲಿ ಚತುರ್ಸಮುದ್ರ ಸ್ನಾನವನ್ನು ಮಾಡಿ, ಸೂರ್ಯದೇವನಿಗೆ ಅರ್ಘ್ಯವನ್ನು ಕೊಟ್ಟು ಸದಾಶಿವನನ್ನು ನೆನವರಿಕೆ ಮಾಡಿ ಆ ಬಳಿಕ ರಾಜವೇಷಭೂಷಿತನಾಗಿ ನಮ್ಮ ರಾಜಸ್ಥಾನವನ್ನು ಪ್ರವೇಶಿಸುವುದು

ನಿತ್ಯದ ಕ್ರಮ. ಈ ಕ್ರಮವನ್ನು ನಾನು ನಿನ್ನೆ ಮೊನ್ನೆಯಿಂದ ನಡೆಸಿಕೊಂಡು ಬಂದವನಲ್ಲ. ಈ ಸಾಮ್ರಾಜ್ಯದ ಅಧಿಕಾರ ಸಿಕ್ಕಿದಂದಿನಿಂದ ಅನುಷ್ಠಾನಕ್ಕೆ ತಂದಿದ್ದೇನೆ. ಈ ರೀತಿಯ ನಿಷ್ಠೆಯನ್ನು ಎಡೆಬಿಡದೆ ಪಾಲಿಸುವುದರಿಂದ ನನಗೆ ನಿಷ್ಠಾವಂತ ವಾಲಿ ಎಂಬ ಹೆಸರು ಬಂದಿದೆ. ಅದಲ್ಲದೆ ರಾಜ್ಯಕಟ್ಟಿ ಆಳುವಂತಹ ಅರಸರಿಗೆ ಇಂತಹ ನಿಷ್ಠೆಯ ಜೀವನ ಅಗತ್ಯ. ಕಾರಣ ರಾಜ್ಯವು ಐದು ಬಗೆಯ ಗಂಡಾಂತರಗಳಿಂದ ಅವನತಿಹೊಂದುವ ಸಂಭವವಿದೆ. ಆದರೆ ಮನುಷ್ಯರಿಂದ ಬರಬಹುದಾದ ಐದು ಬಗೆಯ ಆಪತ್ತುಗಳನ್ನು ಸ್ವಪ್ರಯತ್ನದಿಂದ ದೂರ ಮಾಡಲು ಪ್ರತಿಯೊಬ್ಬ ರಾಜನಿಗೂ ಸಾಧ್ಯವಿದೆ. ಇನ್ನು ದೈವದತ್ತವಾದಂತಹ ಐದು ಬಗೆಯ ಆಪತ್ತುಗಳಿವೆ. ಅವು ಅಗ್ನಿ ಭಯ, ಜಲಭಯ, ಕ್ಷಾಮ, ವ್ಯಾಧಿ, ಮರಣಗಳೆಂಬುವು. ಇವನ್ನು ದೂರಮಾಡಬೇಕಾದರೆ ದೈವದ ಕರುಣೆಯೇ ಅಗತ್ಯ. ಅಂತಹ ದೈವದ ಅನು ಗ್ರಹ ಸಂಪಾದನೆ ಮಾಡುವುದಕ್ಕಾಗಿ ಈ ಕ್ರಮದ ನಿಷ್ಠೆಗಳೆಲ್ಲ ಅಗತ್ಯ. ಇಂದು ಕೂಡಾ ನಿದ್ದೆಯಿಂದ ಎಚ್ಚೆತ್ತ ನಾನು ಮಾತಾಡುತ್ತಿದ್ದಂತೆ ಸೂರ್ಯೋ ದಯ ಕಾಲವು ಪ್ರಾಪ್ತವಾಗುತ್ತಿದೆ. ಇನ್ನು ತಡ ಮಾಡುವುದು ಸರಿಯಲ್ಲ. ನನ್ನ ನಿತ್ಯಕರ್ಮವಾದ ಸಮುದ್ರ ಸ್ನಾನಕ್ಕೆ ಮನಮಾಡಬೇಕು. ನೋಡೋಣ.

ಪದ್ಯ: ಪೂರ್ವ ಪಶ್ಚಿಮ ದಕ್ಷಿಣವೊಳವ। ತೀರಿಸುತ ಸ್ನಾನಗಳನು ತ್ತರ| ವಾರಿಧಿಗೆ ಬರೆಬೊಬ್ಬೆ ಕೇಳ್ದತಿ। ದೂರದಿಂದಾ॥

ವಾಲಿ: ಪ್ರಥಮ ಯಾವ ದಿಕ್ಕಿಗೆ ಹೋಗುವುದೆಂದು ಆಲೋಚನೆ ಮಾಡಬೇಕಾದುದೇ ಇಲ್ಲ. ನಿತ್ಯವೂ ಪೂರ್ವ ಸಮುದ್ರವನ್ನು ಮಿಂದು ಪಶ್ಚಿ ಮವನ್ನು ಸೇರಿ ದಕ್ಷಿಣ ಸ್ನಾನವನ್ನು ಮುಗಿಸುವ ಕ್ರಮ. ಹಾಗೆಯೇ ಮಿಂದಾ ಯಿತು. ಇನ್ನು ಉಳಿದದ್ದು ಉತ್ತರ ಸಮುದ್ರ. ಆ ಕಡೆಗೆ ಲಂಘಿಸುತ್ತೇನೆ. ಛೆ ! ಇದೇನು ಎಂದಿನಂತೆ ಉತ್ತರ ದಿಕ್ಕಿಗೆ ಬಂದಂತಹ ನಾನು ಕ್ರಮ ಪ್ರಕಾರ ಸಮುದ್ರ ಸ್ನಾನವನ್ನು ಮಾಡಿಯಾಯಿತು. ಆದರೆ ಆ ಕಡೆಗೆ ನೋಡಿದರೆ ಬಹುಮಂದಿ ಸೇರಿ ಏನೋ ಕಾರ್ಯದಲ್ಲಿ ತೊಡಗಿ ಬೊಬ್ಬೆ ಹಾಕುವಂತೆ ಕೇಳಿ ಸುತ್ತಿದೆ. ಎಂದೂ ಇಲ್ಲದ ಇವರು ಯಾರು? ಏನು ಮಾಡುತ್ತಿರುವರು? ಇದನ್ನು ತಿಳಿಯಲೇಬೇಕು. ಅದಕ್ಕಾಗಿ ಆ ಕಡೆಗೆ ನಡೆಯುತ್ತೇನೆ. ಆಹಾ

ಇದೇನು ವಿಚಿತ್ರ! ಇಲ್ಲಿ ನೆರೆದವರು ಸಾಮಾನ್ಯರಲ್ಲ. ಸ್ವರ್ಗದ ದೇವತೆಗಳು ಹಾಗೂ ಅಸಂಖ್ಯಾತ ರಾಕ್ಷಸರು. ಇವರು ಏನು ಮಾಡುತ್ತಿರುವರೆಂದೇ ನನಗೆ ಅರ್ಥವಾಗುವುದಿಲ್ಲ. ಯಾರಲ್ಲಿ ಕೇಳಿ ತಿಳಿಯಲಿ? ಯಾರಲ್ಲಿ ಕೇಳುವುದೇನು ನಾನೇಕೆ ಚಿಂತಿಸಬೇಕು? ಈ ಕಡೆ ನೋಡಬಾರದೆ? ನನ್ನ ಜನ್ಮಕ್ಕೆ ಕಾರಣ ಭೂತರಾದ ಅಮರೇಂದ್ರರು ನಿಂತಿರುವರು. ಅವರಲ್ಲಿಯೇ ವಿಚಾರಿಸುತ್ತೇನೆ.

ರಾಗ ಕೇಧಾರ ಗೌಳ—ಝಂಪತಾಳ

ಪದ್ಯ: ನುಡಿಯನವಧರಿಸುಜೀಯಾ। ನಿರ್ಜರರ। ಗಡಣಸಹಿತೇನು ಕಾರ್ಯಾ॥ ನಡೆಸುತ್ತಲಿರುವುದೆಂದೂ। ಪೇಳುವುದು। ದೃಢತೆಯನು ಸುಗುಣ ಸಿಂಧೂ ॥ ೧ ॥

ವಾಲಿ: ಜನಕ, ನಿಮ್ಮ ಪವಿತ್ರವಾದ ಪಾದಕ್ಕಿದೋ ವಂದನೆ. ನೀವು ಒಬ್ಬರೇ ಅಲ್ಲ ದೇವ ತಿಂಥಿಣಿಯನ್ನೇ ಕೂಡಿಕೊಂಡು ಇಲ್ಲಿ ಏನೋ ಮಾಡು ತ್ತಿರುವಂತೆ ಕಾಣಿಸುತ್ತಿದೆ. ನೀವು ಮಾಡುವ ಕಾರ್ಯವಾದರೂ ಏನು? ಈ ಕಡೆಯಲ್ಲಿ ಕೋಟಿಗಟ್ಟಲೆ ರಾಕ್ಷಸರು ಇದ್ದಾರೆ. ಇವರೆಲ್ಲ ಇಲ್ಲಿಗೆ ಬಂದು ದೇಕೆ? ನೀವು ಕರೆದುಕೊಂಡು ಬಂದುದೆ? ಅಲ್ಲ ಅವರ ಕಾರ್ಯನಿಮಿತ್ತ ನೀವು ಇಲ್ಲಿಗೆ ಬಂದುದೆ? ಅಪ್ಪಾ, ಇದರ ನಿಜಾಂಶವನ್ನು ತಿಳಿಸಿರಿ.

ಪದ್ಯ: ಅತ್ರಿಜನ ಕೋಪದಿಂದಾ। ನಾಕಕಾ। ಪತ್ತು ಒದಗಿಹುದು ಕಂದಾ। ಉತ್ತಮದ ಭಾಗ್ಯ ಶರಧೀ। ಪಾಲಾಗಿ। ನಿತ್ತಿರುವುದೀ ವೇಳ್ಯದಿ॥

ದೇವೇಂದ್ರ: ವಾಲಿ, ಪ್ರಕೃತದ ದೃಶ್ಯವನ್ನು ಕಂಡಾಗ ನಿನಗೆ ಆಶ್ಚರ್ಯವಾಗುವುದು ಸಹಜ. ನಾವು ಎಂದೂ ಗ್ರಹಿಸದ ಘಟನೆ ಸ್ವರ್ಗದಲ್ಲಿ ನಡೆದು ಹೋಯಿತು. ನಾನು ದೇವತೆಗಳನ್ನೆಲ್ಲಾ ಕೂಡಿಸಿ ನಮ್ಮ ಲೋಕದ ವರ್ಷದ ಉತ್ಸವವನ್ನು ಆಚರಿಸುವುದಕ್ಕಾಗಿ ಐರಾವತವನ್ನು ಏರಿ ಸಂಭ್ರಮದ ಮೆರವಣಿಗೆಯಲ್ಲಿ ಸಾಗುತ್ತಿದ್ದೆ. ಆ ಸಮಯದಲ್ಲಿ ಅತ್ರಿಕುಮಾರರಾದ ದೂರ್ವಾಸ ಮಹಾಮುನಿಗಳು ಒಂದು ಸುಮಾಲೆಯನ್ನು ತಂದು ನನ್ನ ಕೊರಳಿಗೆ ಹಾಕಿದರು. ಏನೋ ಕಾಲದೋಷದಿಂದ ನನ್ನ ಬುದ್ಧಿ ಭ್ರಮಣವಾಗಿ ಆ ಮಾಲೆಯನ್ನು ತೆಗೆದು ನಾನೇರಿದ ಆನೆಯ ಕೊರಳಿಗೆ ಹಾಕಿದೆ. ಆನೆ ತೆಗೆದು

ಕಾಲ ಕೆಳಗೆ ಹಾಕಿ ಮೆಟ್ಟಿ ಪುಡಿಮಾಡಿತು. ಇದನ್ನು ಕಂಡ ಮುನಿವರು ಕೋಪಗೊಂಡು ನನಗೆ ಶಾಪವನ್ನಿತ್ತರು. ಸ್ವರ್ಗದ ಸಂಪತ್ತೆಲ್ಲ ಸಮುದ್ರ ಪಾಲಾಗಿ ಹೋಗಲಿ ಎಂದರು. ಅಲ್ಲದೆ ಸ್ವರ್ಗವು ರಾಕ್ಷಸರ ವಶವಾಗಲಿ ಎಂದ ಅವರ ಶಾಪದಂತೆ ಸಂಪತ್ತೆಲ್ಲವೂ ಶರಧಿ ಪಾಲಾದುದಲ್ಲದೆ ಸ್ವರ್ಗವು ಬಲಿಚಕ್ರವರ್ತಿಯು ಸ್ವಾಧೀನವಾಯಿತು. ಇಷ್ಟಕ್ಕೆ ನಾವು ಮರುಗಬೇಕಾದುದಿಲ್ಲ. ಕಷ್ಟ ಬಂದಾಗ ನಮ್ಮ ಇಷ್ಟದೈವದಲ್ಲಿ ದೂರಿಟ್ಟು ಅವರ ಆದೇಶದಂತೆ ರಾಕ್ಷಸರೂ ನಾವೂ ಒಂದಾಗಿ ಕಳೆದು ಹೋದ ಸಂಪತ್ತನ್ನು ಮರಳಿ ಪಡೆಯುವುದಕ್ಕಾಗಿ ಈ ಸಮುದ್ರಮಥನ ಎನ್ನುವ ಘನಕಾರ್ಯಕ್ಕೆ ತೊಡಗಿದ್ದೇವೆ. ಮಥಿಸಿ ಆಯಾಸಗೊಂಡ ನಾವು ಸ್ವಲ್ಪ ವಿಶ್ರಾಂತಿಯಾಗಿ ಸುಮ್ಮನೆ ನಿಂತಿದ್ದೇವೆ. ಇಲ್ಲಿ ನಡೆಯುವ ಕಾರ್ಯ ಸಮುದ್ರಮಥನ ಪಂಗನೆ! ಸಮುದ್ರಮಥನ.

ರಾಗ ಭೈರವಿ ಅಷ್ಟತಾಳ

ಪದ್ಯ: ಪರಿಹಾಸ್ಯವಿದು ಜಗಕೇ। ಕೂಡುತ ಸುರಾ। ಸುರರಬ್ಧಿ ಮಥಿಪುದಕೇ॥ ಪರಿಪರಿ ಕಷ್ಟವಾಂತರುಯೆಂಬುದರಿತರೆ। ಕೊರತೆ ನಿಮ್ಮಯ ಸ್ಥಾನಕೇ॥

ವಾಲಿ: ಅಪ್ಪ, ನೀವು ತೋಡಗಿದಂತಹ ಕಾರ್ಯದಲ್ಲಿ ಬಹುರೀತಿಯ ಆಯಾಸಪಟ್ಟಿರಿ ಎನ್ನುವ ವಿಷಯವನ್ನು ಕೇಳಿದಾಗ ನನಗೆ ನಾಚಿಕೆಯಾಗುತ್ತಿದೆ ಈ ವಿಷಯವನ್ನು ಬೇರೆ ಎಲ್ಲಿಯಾದರೂ ಹೇಳಬೇಡಿರಿ. ಏಕೆ ಗೊತ್ತೆ? ಅಪ್ಪ, ನೀವೆಂದರೆ ಸಾಮಾನ್ಯದವರಲ್ಲ. ಮೂರು ಲೋಕದ ಒಡೆಯರು. ಮೂವತ್ತಮೂರು ಕೋಟಿ ದೇವತೆಗಳಿಗೆ ಅಧಿಪತಿ. ಈ ರಾಕ್ಷಸರೂ ಅಷ್ಟೇ. ಒಬ್ಬರಿಗಿಂತ ಒಬ್ಬರು ಅತಿ ಬಲಾನ್ವಿತರೆಂದು ಪ್ರಸಿದ್ಧಿ ಪಡೆದವರು. ಅವರು ಅರುವತ್ತಾರು ಕೋಟಿ, ನೀವೂ ಸೇರಿ ತೊಂಭತ್ತೊಂಭತ್ತು ಕೋಟಿ ಆಯಿತಲ್ಲವೆ? ಇಷ್ಟು ಮಂದಿ ಸೇರಿಯೂ ಈ ಕೆಲಸಕ್ಕೆ ಕಷ್ಟವಾಯಿತೆಂದರೆ ಇದು ಲೋಕಕ್ಕೆ ಪರಿಹಾಸ್ಯ. ಅಲ್ಲದೆ ನಮ್ಮ ಗಂಡುತನಕ್ಕೆ ದೊಡ್ಡ ಕೊರತೆಯೇ ಸರಿ. ಎರಡು ತಂಡದವರಾದ ನೀವು ಪಡೆದಂತಹ ಸತ್ಕೀರ್ತಿಗೆ ಧಕ್ಕೆ. ಇದು ಸಾಮಾನ್ಯ ಬಲಹೀನರ ವರ್ತನೆಯಾಯಿತಲ್ಲದೆ, ಧೀರರ, ಶೂರರ ಕಾರ್ಯವಾಗಲಿಲ್ಲ. ಈ ಸಾಮಾನ್ಯ ಶರಧಿ ಮಥನಕ್ಕೆ ಇಷ್ಟು ಮಂದಿ ಬೇಕೇನಪ್ಪ?

ಪದ್ಯ: ದೂರದಿಂ ನೋಳ್ಪುದಯ್ಯಾ। ನಾನೋರ್ವನೆ ವಾರಿಧಿ ಮಥಿಪ ರಿಯರ್ಗೆ॥ ತೀರಿಪೆನೆನುತಲಿ ಇಳಿದನಬ್ಧಿಗೆ ಹುಂ। ಕಾರ ಗೊಳ್ಳಾಂತು ಧೈರ್ಯರ್ಗೆ॥

ವಾಲಿ: ಪಿತನೇ. ಈ ಕೆಲಸ ನಿಮ್ಮ ದೃಷ್ಟಿಯಲ್ಲಿ ಅತಿ ದೊಡ್ಡದಿರ ಹುದು. ಆದರೆ ನನಗೆ ಇದೊಂದು ಘನಕಾರ್ಯವೆಂದೇ ತೋರುವುದಿಲ್ಲ. ನೀವೂ ಈ ರಾಕ್ಷಸರೂ ಎಲ್ಲರೂ ಈ ಸರ್ಪನನ್ನು ಬಿಟ್ಟು ದೂರ ನಿಲ್ಲಿ. ನಾನೊಬ್ಬನೇ ಈ ವಾಸುಕಿಯ ಹೆಡೆಯನ್ನೂ ಬಾಲವನ್ನೂ ಹಿಡಿದು ಈ ಶರಧಿ ಮಥನವನ್ನು ಮಾಡಿ ಕಳೆದುಹೋದ ನಿಮ್ಮ ಸಂಪತ್ತನ್ನು ಪುನಃ ಬರಿಸುತ್ತೇನೆ. ಇದು ಖಂಡಿತ. ಆದುದರಿಂದ ನೀವೆಲ್ಲ ದೂರ ಹೋಗಿರಿ.

ಇಂದ್ರ: ಕಂದ, ನಿನ್ನ ಈ ರೀತಿಯ ಪೌರುಷದ ನುಡಿಯನ್ನು ಕೇಳಿ ದಾಗ ನನಗೆ ಮಾತ್ರವಲ್ಲ ಇಲ್ಲಿ ಇರುವವರೆಲ್ಲರಿಗೂ ಆಶ್ಚರ್ಯವಾಗುತ್ತಿದೆ. ಇಷ್ಟು ಮುಂದಿಯಿಂದ ಆಗದಂತಹ ಕೆಲಸವನ್ನು ನಾನೋರ್ವನೆ ಮಾಡಿ ಮುಗಿ ಸುವೆನೆಂದು ಹೇಳುತ್ತಿರುವೆಯಲ್ಲ. ನಿಜಕ್ಕೂ ನೀನು ಮಾಡಿದೆಯೆಂದರೆ ನಿನ್ನನ್ನು ಮಗನನ್ನಾಗಿ ಪಡೆದ ನಾನೇ ಧನ್ಯ. ಹಾಗಾಗಿ ನಿನ್ನ ಈ ತರದ ಉಲ್ಲಾಸಕ್ಕೆ ಅಡ್ಡಿ ತರುವುದಿಲ್ಲ. ನಾವೆಲ್ಲರೂ ದೂರ ನಿಲ್ಲುತ್ತೇವೆ. ನೀನೇ ಮುಂದುವರಿಸು.

ವಾಲಿ: ಸರಿ, ನಾನು ನುಡಿದಂತೆ ಕಾರ್ಯವನ್ನೆಸಗುತ್ತೇನೆ. ಜನಕ, ಇದೋ ಈ ಸರ್ಪನ ಹೆಡೆಯನ್ನು ನನ್ನ ಬಲದ ಕೈಯಲ್ಲಿ ಹಿಡಿದು ಇನ್ನೊಂದು ಕೈಯಲ್ಲಿ ಬಾಲವನ್ನು ಹಿಡಿದು ಸಿಡಿಲಿನ ಗರ್ಜನೆಯನ್ನು ಅಡಗಿಸುವಂತಹ ಶಬ್ದದಿಂದ ಘುಡುಘುಡಿಸಿ ಸಮುದ್ರಮಥನ ಮಾಡುತ್ತೇನೆ. ನೋಡಿರಿ.

ರಾಗ ಸಾಂಗತ್ಯ ರೂಪಕ

ಪದ್ಯ: ಝಗ ಝಗಿಸುವ ತನುಕಾಂತಿಯಿಂಶೋಭಿಪ। ನಗೆಮೊಗದ ಬಲಿ ವೈಯಾರೇ। ಬಗೆ ಬಗೆ ಶೃಂಗಾರದಿಂದ ತೋರ್ದಳು ಸತಿ। ಜಗಕೆ ಚೋದಿಗವಪ್ಪ ತೆರದೀ ॥ ೧ ॥

ವಾಲಿ: ಆಹಾ, ಇದೇನು ನಾನೋರ್ವನೆ ಶರಧಿಯನ್ನು ಮಥಿಸುತ್ತಿದ್ದಂತೆ ಈ ನೀರಿನ ಆಡಿಯಿಂದ ಈ ಲೋಕವನ್ನೇ ಬೆರಗುಗೊಳಿಸುವಂತಹ,

ಹೊಸ ಸೂರ್ಯದೇವನೆ ಉದಯಿಸಿ ಬಂದಂತೆ ವಿಶೇಷವಾದ ಅಂಗ ಸೌಂದ ರ್ಯವ ಸುದತಿಯೋರ್ವಳು ಮೇಲೆದ್ದು ಬಂದಿರುವಳು. ಇವಳ ಶೃಂಗಾರ ವಯ್ಯಾರಾದಿಗಳು ಲೋಕಕ್ಕೆ ಕೌತುಕವನ್ನು ಉಂಟುಮಾಡಬಲ್ಲವು. ಇದು ನನ್ನ ಶ್ರಮದ ನಿಮಿತ್ತ ದೊರಕಿದ ಫಲ. ಇದನ್ನು ನನ್ನ ತಂದೆಯವರಿಗೆ ಒಪ್ಪಿಸಬೇಕು. ಅದಕ್ಕಾಗಿ—

ಪದ್ಯ : ನಿಲಿಸುತ್ತ ಮಥನವ ಚೆಲುವೆಯು ಪಿಡಿದೊಯ್ದು। ವಲ ವೈರಿಗೊಪ್ಪಿಸುತೆಂದಾ॥ ಜಲಧಿಯಿಂದುದಿಸಿದ ಸ್ತ್ರೀರತ್ನವಿದಕೊಳ್ಳಿ। ನ್ನುಳಿ ದುದ ಶೋಧಿಪೆನೆಂದಾ ॥ ೧ ॥

ವಾಲಿ : ರಭಸದಿಂದ ಮಾಡುತ್ತಿರುವ ಈ ಮಥನದ ಕೆಲಸವನ್ನು ನಿಲ್ಲಿಸಿ ಬಂದಂತಹ ಇವಳ ಕೈಹಿಡಿದು ತಂದೆಯ ಬಳಿಗೆ ಕರೆದುಕೊಂಡು ಹೋಗುತ್ತೇನೆ. ಅಪ್ಪ, ಇದೋ ನೋಡಿ, ಈ ಮಹಾ ಶರಧಿಯಿಂದ ಎದ್ದು ಬಂದಂತಹ ನಾರಿ ಈಕೆ. ಇವಳನ್ನು ಹಿಡಿದುಕೊಳ್ಳಿರಿ. ಇನ್ನು ಈ ಸಮುದ್ರದಲ್ಲಿ ಏನೆಲ್ಲ ಇದೆ ಎಂದು ಶೋಧಿಸುತ್ತೇನೆ. ನೋಡಿರಿ.

ಪದ್ಯ: ತಿಳಿದು ನೋಡೀಕೆಯು ಕರವಿತ್ತು ತಂದಿಪೆ। ಸಲುವಳೆಲ್ಲೆನಗೆ ನೀ ನೊಯ್ದು॥ ಚೆಲುವೆಯು ಕೂಡಿಕೊಂಡಿರು ಸುರಾಸುರರೊಳು। ವಾಲಿ ಯರುಯಿದಕೆನಲೆಂದಾ ॥

ಇಂದ್ರ: ಮಗನೆ ಶರಧಿ ಮಥನವನ್ನು ನಾನೋರ್ವನೆ ಮಾಡುತ್ತೇನೆ ಎಂದು ನೀನು ಉತ್ಸಾಹದಿಂದ ಕೇಳಿದಾಗ ನಾನು ನಿನ್ನ ಉತ್ಸಾಹವನ್ನು ಭಂಗ ಗೊಳಿಸುವುದು ಬೇಡವೆಂದು ಒಪ್ಪಿಗೆ ಕೊಟ್ಟೆ. ಆದರೆ ನಿಜಕ್ಕೂ ನಿನ್ನೋರ್ವ ನಿಂದಲೇ ಈ ಕಾರ್ಯ ಕೈಕೂಡಿತೆನ್ನುವ ಭರವಸೆ ನನಗಿರಲಿಲ್ಲ. ಈಗ ಮಾತ್ರ ಇನ್ನೂ ನಿನ್ನನ್ನೇ ಬಿಟ್ಟರೆ ಈ ಸಾಗರದಲ್ಲಿರುವ ಸಮಸ್ತ ವಸ್ತುಗಳನ್ನು ನೀನೇ ಮೇಲಕ್ಕೆ ಎಬ್ಬಿಸುತ್ತಿ ಎನ್ನುವುದಕ್ಕೆ ಸಂದೇಹವಿಲ್ಲ. ಆದರೆ ಮಗನೆ ಈ ವಿಷಯದಲ್ಲಿ ಒಂದು ತೊಂದರೆಯಾಗಿರುವುದು, ಇದರಲ್ಲಿ ಅಡಗಿ ಹೋದ ಸಂಪತ್ತು ಸುರಾಸುರರಾದ ನಮಗೆ ಸಂಬಂಧಪಟ್ಟದ್ದು. ಸದ್ಯ ನಾವೊಂದು ತೀರ್ಮಾನ ಮಾಡಿದ್ದೇವೆ. ಈಗ ನಾವು ಮಥಿಸುತ್ತಿದ್ದಂತೆ

ಬಂದ ಸೊತ್ತು ಯಾರ ಕೈಗೆ ಸಿಕ್ಕಿತೋ ಅವರವರೇ ಇಟ್ಟುಕೊಳ್ಳುವುದೆಂದು. ಹಾಗಾಗಿ ನಿನ್ನ ಪ್ರಯತ್ನದಿಂದ ಮೇಲೆ ಬಂದ ಈಕೆಯನ್ನು ನೀನೇ ಕೈಹಿಡಿದು ತಂದಿದ್ದೀಯ. ಆದ್ದರಿಂದ ಇವಳು ನಿನಗೇ ದಕ್ಕತಕ್ಕವಳಲ್ಲದೆ ನಾವು ಯಾರೂ ಸ್ವೀಕರಿಸುವುದು ಸರಿಯಲ್ಲ. ಆದರೆ ವಾಲಿ! ನಿನಗೊಂದು ಸೂಚನೆ ಕೊಡುತ್ತೇನೆ. ಈ ಸಂಪತ್ತಿಗೆ ಇತ್ತಂಡದವರಾದ ನಾವೇ ಬಾಧ್ಯರು ಹೊರತು ಅನ್ಯರಿಗೆ ಸಲ್ಲತಕ್ಕದ್ದಲ್ಲ. ಹಾಗಾಗಿ ನೀನು ಇನ್ನು ಮಥನವನ್ನು ಮುಂದುವರಿಸದೆ ಈಕೆಯನ್ನು ಸ್ವೀಕರಿಸಿ ನಿನ್ನ ಸ್ಥಾನಕ್ಕೆ ತೆರಳಬೇಕೆಂದು ನನ್ನ ಅಭಿಪ್ರಾಯ. ನೀನೇನು ಹೇಳುತ್ತಿ ಮಗನೆ ?

ವಾಲಿ: ಅಪ್ಪ, ನಿಮ್ಮ ಅಭಿಪ್ರಾಯ ಹಾಗಿದ್ದರೆ ಬಲ್ಲೆನೆನ್ನುವವನು ನಾನಲ್ಲ. ನಿಮ್ಮ ಸೂಚನೆಯಂತೆ ಮಥನವನ್ನು ನಿಲ್ಲಿಸಿದ್ದೇನೆ. ಈ ಸಮುದ್ರದಿಂದ ಎದ್ದು ಬಂದಂತಹ ತಾರಾದೇವಿಯನ್ನು ಸಮಸ್ತ ಸುರಾಸುರರಾವ ನಿಮ್ಮ ಸಮ್ಮುಖದಲ್ಲಿಯೇ ನನ್ನ ಪತ್ನಿಯನ್ನಾಗಿ ಸ್ವೀಕರಿಸಿಕೊಂಡಿದ್ದೇನೆ. ಅಪ್ಪ, ಇನ್ನು ಇಲ್ಲಿಂದ ತೆರಳುವ ಮುನ್ನ ಒಮ್ಮೆ ಇಲ್ಲಿ ನೆರೆದವರನ್ನೆಲ್ಲ ದಿಟ್ಟಿಸಿ ನೋಡುತ್ತೇನೆ.

ಇಂದ್ರ: ಆದೀತು ಕಂದ ಆದೀತು.

ಕಂದ

ಪದ್ಯ: ಸುರರಸುರರ ತುಸು ದೂರದಿ । ಕಿರುನಗೆ ಪಸರಿಸುತಲಿನ್ನ ನರೆ ನೋಟದೊಳಂ ॥ ಪರಿಕಿಪ ನೀಲಾಂಗನ ನಾ । ನರಿಯ ನಿವನ ನಾವನೆಂದು ತಿಳುಹೆನಲೆಂದಂ ॥ ೧ ॥

ವಾಲಿ: ಜನಕ. ಎಲ್ಲರನ್ನು ನೋಡಿದೆ. ಎಲ್ಲರೂ ನನ್ನನ್ನು ನೋಡಿ ಭಯಭೀತರಾಗಿರುವರು. ಆದರೆ ಅಪ್ಪ, ದೇವತೆಗಳಾದ ನಿಮ್ಮಿಂದಲೂ ರಾಕ್ಷಸರಾದ ಬಲಿಚಕ್ರವರ್ತಿಯೇ ಮೊದಲಾದ ಎಲ್ಲರಿಂದಲೂ ಸ್ವಲ್ಪ ದೂರದಲ್ಲಿ ಒಬ್ಬ ವ್ಯಕ್ತಿಯು ಕುಳಿತಿರುವನು. ನೀಲವರ್ಣದಿಂದ ಕೂಡಿದ ಆತನು ಕಿರುನಗೆಯನ್ನು ಹೊರಸೂಸುತ್ತ ನನ್ನನ್ನು ಅರೆನೋಟದಿಂದ ನೋಡುತ್ತಿರುವನಲ್ಲ. ಅವನು ಯಾರು? ಅವನ ಪರಿಚಯವೇ ನನಗಿಲ್ಲ. ಇಲ್ಲಿಯ

ಹೋಗುವ ಮುನ್ನ ಇವನ ಪರಿಚಯ ಮಾಡಿಕೊಳ್ಳಬೇಕೆನ್ನುವ ಆಸೆ ನನಗಾಗಿದೆ. ಜನಕನೇ, ನನ್ನ ಮೇಲೆ ಪ್ರೀತಿಯಿಟ್ಟು, ಇವನಾರೆಂದು ತಿಳಿಸುವಿರೆ ?

ಇಂದ್ರ: ವಾಲಿ, ಆ ನೀಲ ಮೇಘ ಶ್ಯಾಮನ ಪರಿಚಯವೆ? ಕೇಳು.

ರಾಗ ಸೌರಾಷ್ಟ್ರ ತ್ರಿವುಡತಾಳ

ಪದ್ಯ: ಬಣ್ಣಿಸುವದೇನವನ ಬಲ ಸಂ। ಪೂರ್ಣವರಿಯರು ವಿಧಿ ಭವಾದ್ಯರು। ಸಣ್ಣ ಕಾಯದಿ ತೋರ್ದಡೆಯು ಚೈ। ತನ್ಯರೂಪಾ ॥ ೧ ॥

ಇಂದ್ರ: ವಾಲಿ, ನೀನು ತಿಳಿಯಬೇಕೆಂದು ಆಸೆಪಟ್ಟ ಆ ಮಹಾ ವಿಷ್ಣುವಿನ ಪರಿಚಯವನ್ನು ಹೇಗೆ ಹೇಳಲಿ? ಅವನ ಯೋಗ್ಯತೆಯನ್ನು ಏನೆಂದು ಬಣ್ಣಿಸಲಿ? ಅಲ್ಲದೆ ಅವನ ಬಲದ ಉನ್ನತಿಕೆಯನ್ನು ಪೂರ್ಣವಾಗಿ ತಿಳಿಯಲು ಬ್ರಹ್ಮ, ಮಹೇಶ್ವರರಿಂದಲೂ ಅಸಾಧ್ಯ. ಈಗ ಕಾಣುವುದಕ್ಕೆ ಸಣ್ಣ ಮೂರ್ತಿಯಾಗಿ ಕಂಡರೂ ವಿಶೇಷವಾದ ಚೇತನ ಸ್ವರೂಪಿ ಆತ.

ವಾಲಿ: ಅಪ್ಪ, ನೀವು ಇಷ್ಟು ಹೊಗಳಬೇಕಾದರೆ ಅವನು ಮಾಡಿದ ಘನವಾದ ಕೆಲಸ ಏನಾದರೂ ನಿಮಗೆ ತಿಳಿದಿದೆಯೇ ?

ಇಂದ್ರ: ಓ! ಧಾರಾಳ. ಕೇಳು.

ಪದ್ಯ: ಘೋರದಾನವ ಕುಲಕುಠಾರನು। ವೀರರಿಂಗತಿ ವೀರರೆಲ್ಲರ। ಮೀರಿರುವ ಭಯಲೇಶವಿಲ್ಲದ। ಕಾರಣೀಕಾ ॥ ೨ ॥

ಇಂದ್ರ: ಮಗನೆ, ಈ ಸ್ವಾಮಿಯು ಮಾಡಿದಂತಹ ಕೆಲಸ ಒಂದೆರಡಲ್ಲ. ಸಾವಿರಾರು ಇವೆ. ಅದರಲ್ಲಿ ಒಂದನ್ನು ಹೇಳುತ್ತೇನೆ. ಈ ಲೋಕದಲ್ಲಿ ಅಧರ್ಮ, ಅನ್ಯಾಯ, ಅನಾಚಾರವನ್ನು ಮಾಡಿಕೊಂಡು ಬರುವಂತಹ ಕ್ರೂರರಾದ ರಾಕ್ಷಸರ ಕುಲವೆಂಬ ಮಹಾವೃಕ್ಷಕ್ಕೆ ಕೊಡಲಿಪ್ರಾಯನಾಗಿದ್ದಾನೆ. ಎಂತಹ ಪರಿಸ್ಥಿತಿಯೇ ಬಂದರೂ ಎದೆಗುಂದದ, ಭೀತಿ ಹೊಂದದ, ಧೈರ್ಯಶಾಲಿ. ಅಲ್ಲದೆ ಪ್ರಪಂಚದಲ್ಲಿ ನಾವು ವೀರರು ಎಂದು ಕೊಚ್ಚಿಕೊಳ್ಳುವಂತಹ ಎಷ್ಟೇ ಮಂದಿ ವೀರರಿರಲಿ. ಅವರೆಲ್ಲರಿಂದಲೂ ಹೆಚ್ಚಿನ ಬಲಶಾಲಿ ಇವನೆನ್ನುವುದಕ್ಕೆ ಸಂದೇಹವೇ ಇಲ್ಲ.

ವಾಲಿ: ತಂದೆಯೇ, ಇವನ ಕಾರ್ಯವನ್ನು ಬಗೆಬಗೆಯಾಗಿ ಬಣ್ಣಿಸುತ್ತಿರುವಿರಿ. ಬೇರೆಯವರ ವಿಷಯ ಬಿಡೋಣ. ನಿಮ್ಮ ಮಗನಾದ ನನ್ನ ಸಾಮರ್ಥ್ಯವನ್ನು ನೀವು ಚೆನ್ನಾಗಿ ತಿಳಿದವರಲ್ಲವೆ? ನನ್ನ ಮತ್ತು ಇವನ ಕುರಿತಾಗಿ ನಿಮ್ಮ ಅಭಿಪ್ರಾಯವೇನು ?

ಪದ್ಯ: ಎಂದಿಗಾದರು ನಿನ್ನ ಶಕ್ತಿಯ। ಕುಂದಿಸುವ ಬಗೆಗಾಗಿಯಿಂದಿಗೆ। ಬಂದವನು ದಿಟವೆಂದು ತಿಳಿಯೈ ಕಂದ ನೀನೂ ॥ ೩ ॥

ಇಂದ್ರ: ವಾಲಿ, ನಿನ್ನ ಸಾಮರ್ಥ್ಯದ ಬಗೆಯನ್ನು ಕೇಳಿ ಮೊದಲೇ ತಿಳಿದಿದ್ದೇನೆ. ಆದರೆ ಈಗ ಇಲ್ಲಿ ಪ್ರತ್ಯಕ್ಷ ಕಂಡೆ. ಈ ವರ್ತಮಾನ ಕಾಲದಲ್ಲಿ ನಿನ್ನ ಸಮಾನರು ಯಾರೂ ಇಲ್ಲ. ಒಂದು ವೇಳೆ ಇನ್ನು ಮುಂದೆ ಯಾವಾಗಲಾದರೂ ನಿನ್ನ ಶೌರ್ಯವನ್ನು ಕುಂದಿಸುವ ಕೆಲಸಕ್ಕೆ ಮನಸ್ಸು ಮಾಡುವುದಾದರೆ ಈ ಚೈತನ್ಯ ಮೂರುತಿ ಓರ್ವನೇ. ಇದಕ್ಕೆ ಸಂಶಯವಿಲ್ಲ. ಆದುದರಿಂದ ಇವನ ಕುರಿತು ನೀನು ಬಹಳ ಜಾಗರೂಕತೆಯಿಂದ ನಡೆದುಕೊಳ್ಳಬೇಕೆಂದು ನನ್ನ ಸೂಚನೆ.

ವಾಲಿ: ಹೌದೆ? ಅಪ್ಪ, ನೀವು ಹೇಳಿದಂತಹ ವಿಷಯ ಸತ್ಯವೆ? ಈ ವದಂತಿಯನ್ನು ಕೇಳಿದಾಗಲೇ ನನ್ನ ಭುಜಗಳು ತನ್ನಷ್ಟಕ್ಕೆ ಸ್ಫುರಣಗೊಳ್ಳುತ್ತಿವೆ. ಜನಕ, ನನ್ನ ಅಭಿಪ್ರಾಯದಲ್ಲಿ ಈ ವರೆಗೆ ನನಗೆ ಸರಿಸಮಾನನಾದ ಸಾಮರ್ಥ್ಯಶಾಲಿ ಯಾರೂ ಇಲ್ಲವೆಂದೇ ಭಾವಿಸಿದ್ದೆ. ಈಗ ನನಗಿಂತಲೂ ಮಿಗಿಲಾದ ಒಬ್ಬ ಕಟ್ಟಾಳು ಇರುವನೆಂದಾಯಿತಲ್ಲ. ಇದಾ ನೆ. ಮಾತ್ರವಲ್ಲ, ನಿಮ್ಮ ಸೂಚನೆ ಪ್ರಕಾರ ಒಂದಲ್ಲ ಒಂದು ದಿನ ಇವನೇ ನನಗೆ ಶತ್ರುವಾದಾನು ಎನ್ನುವ ಅಭಿಪ್ರಾಯವಾಯಿತು. ಹಾಗಾದರೆ ಇವನು ಯಾವಾಗ ಬರುತ್ತಾನೆ ಎಂದು ಎಣಿಕೆಗೈಯುತ್ತಾ ಇರುವುದೇಕೆ? ಅದೆಲ್ಲವನ್ನು ಇವತ್ತೇ ಮುಗಿಸಿಬಿಡುತ್ತೇನೆ. ನೋಡಿ—

ರಾಗ ಭೈರವಿ—ಏಕತಾಳ

ಪದ್ಯ: ನಡೆನಾ ಹರಿಯುದಿರಿನಲೀ। ಭುಜ । ಹೊಡೆದುಬ್ಬುತ ಗರ್ವದಲೀ॥ ನುಡಿದ ಬಲುಹು ನಿನಗಿರಲೂ। ಧುರ । ಕೊಡುಯೆನ್ನೊಡನಿಂದಿನೊಳೂ ॥ ೧ ॥

ವಾಲಿ: ಎಲಾ, ನಿನ್ನನ್ನು ನಾನು ಈ ಮೊದಲು ನೋಡಿದವನಲ್ಲ. ನನ್ನ ಪರಿಚಯ ನಿನಗಿದೆಯೋ ಇಲ್ಲವೊ ಗೊತ್ತಿಲ್ಲ. ಇಲ್ಲಿ ನಿನ್ನ ಸಮಕ್ಷಮದಲ್ಲಿ ನನಗೂ ನನ್ನ ತಂದೆಯವರಿಗೂ ನಡೆದ ಮಾತುಕತೆಯನ್ನು ನೀನು ಕೇಳಿರುವೆಯಷ್ಟೆ? ಹರಿಯೇ ಅವರ ಮಾತಿನ ಒಟ್ಟು ತಾತ್ಪರ್ಯ ನಿನ್ನಂತಹ ಬಲಶಾಲಿ ಈ ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲವೆಂದು. ಇದನ್ನು ಕೇಳಿದ ನನಗೂ ಇಲ್ಲಿರುವವರಿಗೂ ದೊಡ್ಡ ಸಮಸ್ಯೆಯಾಗಿದೆ. ನನ್ನ ಸಾಮರ್ಥ್ಯವನ್ನು ಕೇಳಿ ತಿಳಿಯದ ವ್ಯಕ್ತಿಗಳು ಇರಲಿಕ್ಕಿಲ್ಲ. ಅಂತು ಇಲ್ಲಿ ನೆರೆದ ತೊಂಭತ್ತೊಂಭತ್ತು ಕೋಟಿಗೂ ನಾನು ಮಾಡಿ ತೋರಿದ ಕಾರ್ಯದಿಂದಲೇ ನನ್ನ ಶೌರ್ಯದ ಬಗೆ ಚೆನ್ನಾಗಿ ತಿಳುವಳಿಕೆಯಾಗಿ ಸೆ. ಈಗ ನೀನು ನನಗಿಂತಲೂ ಗಟ್ಟಿಗನೆಂದು ಸ್ವರ್ಗಾಧಿಪರೇ ಹೇಳುವಾಗ ನಿನ್ನ ಮತ್ತು ನನ್ನ ವಿಷಯದಲ್ಲಿ ಅದು ಹೌದೋ ಅಲ್ಲವೋ ಎಂದು ಪರೀಕ್ಷೆ ಮಾಡಿಯೇ ಬಿಡಬೇಕೆಂದು ತೀರ್ಮಾನಿಸಿದ್ದೇನೆ. ನನ್ನ ತಂದೆ ಹೇಳಿದಂತೆ ಶಕ್ತಿ, ಶೌರ್ಯ ನಿನ್ನಲ್ಲಿ ಇರುವುದು ನಿಜವಾದರೆ ಏಳು ಬೇಗ ಬಾ. ನನ್ನಲ್ಲಿ ಯುದ್ಧಕ್ಕೆ ಸಿದ್ಧನಾಗು.

ವಿಷ್ಣು: ವಾಲಿ, ಈಗ ನೀನು ಸಮರಕ್ಕೆ ಸಿದ್ಧನಾದುದೆ? ಅಯ್ಯೋ ನನ್ನ ಅವಸ್ಥೆಯನ್ನು ನೀನು ತಿಳಿದಿಲ್ಲ. ಅದನ್ನು ವಿವರಿಸುತ್ತೇನೆ ಅವಸರ ಮಾಡಬೇಡ ಕೇಳು.

ಪದ್ಯ: ಸಾಮಾನ್ಯನು ನಾನಿಹೆನೂ। ಸು। ತ್ರಾಮಜನತಿ ಬಲ ನೀನೂ॥
ನಾ ಮೊದಲಿನ ತೆರವಿಲ್ಲಾ। ಸಂ। ಗ್ರಾಮಕೆ ಬೆದರುವೆನಲ್ಲಾ ॥ ೨ ॥

ವಿಷ್ಣು: ಓ ಇಂದ್ರಕುಮಾರ ನಿನ್ನ ತಂದೆಯ ಮಾತನ್ನು ಸತ್ಯವೆಂದು ನಂಬಿ ಭುಜಗಳನ್ನು ಕುಣಿಸುತ್ತಾ ಯುದ್ಧಕ್ಕೆ ಮನಮಾಡಿದೆಯಲ್ಲ ವಾಲಿ? ಇವರೆಲ್ಲರೂ ನಂಬಿರುವಂತೆ ನನ್ನ ಸ್ಥಿತಿಗತಿಗಳು ಈಗ ಇಲ್ಲ. ಮೊದಲೆಲ್ಲ ಒಂದು ಕಾಲದಲ್ಲಿ ಕೆಲವು ವೀರರಾದ ರಾಕ್ಷಸರನ್ನು ಕೊಂದಿರಬಹುದು. ಈಗ ಮಾತ್ರ ನಾನು ನಿತ್ರಾಣಿಯಾಗಿದ್ದೇನೆ. ಹಾಗಾಗಿ ನಿನ್ನಂತಹ ರಣಪರಾಕ್ರಮಿಯಲ್ಲಿ ಯುದ್ಧ ಮಾಡುವಂತಹ ಧೈರ್ಯ ನನಗಿಲ್ಲ. ನಿನ್ನೊಡನೆ ಸಂಗ್ರಾಮಕ್ಕೆ ನಾನು ಹೆದರುತ್ತಾ ಇದ್ದೇನೆ ಇದು ಸತ್ಯ.

ಪದ್ಯ: ಇನಿತಿರೆ ಭೀತಿಯು ನಿನಗೆ। ನಿ । ಮಾಯುವವನ್ನಡಿಗಳಿಗೇ॥ ಬಿನುಗ ನಿನ್ನಿಂದಹುದೇನೂ। ಪೇಳಿಸಲೊರೆದನು ಶ್ರೀವರನೂ ॥೩॥

ವಾಲಿ: ಎಲಾ, ವಿಷ್ಣು! ನೀನು ಯುದ್ಧ ಮಾಡಲು ಹೆದರು ತ್ತೀಯಾ? ಇಷ್ಟು ಭೀತಿಯು ನಿನಗುಂಟೆಂದು ಬರೆಯಿ ಜಾಯಲ್ಲಿ ಹೇಳಿದರೆ ಸಾಲದು. ಈ ದೇವಾಸುರರು ನೋಡುವಂತೆ, "ಓ ವೀರಾಗ್ರಣಿಯೇ, ನಿನ್ನಲ್ಲಿ ನನ್ನ ಯುದ್ಧವಿಲ್ಲ. ನಿನಗೆ ನಾನು ಶರಣು. ಇನ್ನು ಮುಂದೆ ನೀನು ಪೇಳಿದಂತೆ ನಾನು ಕೇಳುತ್ತೇನೆ. ನನ್ನನ್ನು ಕಾಪಾಡಬೇಕು" ಎಂದು ಹೇಳಿ, ನನ್ನ ಪಾದಕ್ಕೆ ಅಡ್ಡಬೀಳು. ಹಾಗಿದ್ದರೆ ನಿನ್ನಲ್ಲಿ ನಾನು ಯುದ್ಧ ಮಾಡು ವುದಿಲ್ಲ.

ವಿಷ್ಣು: ವಾಲಿ, ನೀನು ಹೇಳಿದಂತೆ ಮಾಡಬಹುದಿತ್ತು. ಆದರೆ ಸಮರಗೈಯುವ ಶಕ್ತಿ ನನಗಿಲ್ಲವಾದರೂ ಮತ್ತೊಂದು ಬಗೆಯ ದೊಡ್ಡಸ್ತಿಕೆ ನನಗಿದೆ.

ಪದ್ಯ: ದೇವನೆಂದು ಸುರುವರೆನ್ನಾ।ನಾ। ನಾವಿಧವರ ವೀಯುವೆ ನಾ॥ ಕೋವಿದ ನೀ ಕೇಳ್ವುದನೂ। ಹಿತ। ಭಾವದಿಂ ಪಾಲಿಪೆನೂ ॥೪॥

ವಿಷ್ಣು: ವಾಲಿ, ಈ ದೇವತೆಗಳೂ ಇನ್ನುಳಿದ ಮಾನವರೆಲ್ಲರೂ ನನ್ನನ್ನು ದೇವರೆಂದು ನಂಬಿ ಪೂಜಿಸುತ್ತಿರುವರು. ಶಕ್ತಿಯಲ್ಲಿ ನಾನು ಬಡವ ನಾದರೂ ಯಾರು ಏನನ್ನೇ ಕೇಳಲಿ ಅದನ್ನು ಕೊಟ್ಟು ಕಾಪಾಡುವ ಯೋಗ್ಯತೆ ನನ್ನಲ್ಲಿದೆ. ನಿದರ್ಶನಕ್ಕೆ ಬೇಕಾದರೆ ಇಲ್ಲಿ ಈಗ ನೀನೇ ಏನು ಬೇಕಾದರೂ ಕೇಳು ನಾನು ಕೊಡುತ್ತೇನೆ. ಕೇಳಿದ್ದನ್ನು ಕೊಡುವುದರಲ್ಲಿ ನನಗಿಂತ ಎಲ್ಲರೂ ಕೆಳಗೆ. ಇದೊಂದು ಘನಸ್ತಿಕೆ ನನ್ನಲ್ಲಿರುವುದು ಸತ್ಯ. ಹೇಗೆ ಕೇಳುತ್ತೀಯಾ?

ವಾಲಿ: ವಿಷ್ಣು ನಾನು ಕೇಳಬೇಕೆ? ನಿನಗೊಬ್ಬನಿಗೆ ಮಾತ್ರ ಕೊಡುವ ಯೋಗ್ಯತೆ ಇರುವುದೆಂದು ತಿಳಿದಿದ್ದೀಯಾ? ನನ್ನ ವಿಷಯ ಕೇಳು.

ಪದ್ಯ: ಅರಿತು ಬಲಾ ಬಲದೊಳಗೇ। ನಿ। ರ್ಧರಿಪುದು ವರ ಕೋಳಲೆ ನಗೇ॥ ಕೊರತೆಯಪ್ಪುದು ಕರಮುಗಿದೂ। ಮನ। ದಿರ ಕೇಳಿ। ಯುವೆ ನೊಲಿದೂ ॥೪॥

ವಾಲಿ: ಹರಿಯೇ, ಸಮರಕ್ಕೆ ನನ್ನಲ್ಲಿ ಹೆದರಿದಂತಹ ನೀನು ಉಪಾಯ ಮಾಡಿ, ಕೇಳಿದ್ದನ್ನು ಕೊಡುವವ ನಾನು! ನೀನು ಕೇಳೆಂದು ಒತ್ತಾಯಿಸುತ್ತಿರುವೆಯಲ್ಲ? ಛೆ! ನಾನು ನನ್ನ ಜೀವಮಾನದಲ್ಲಿ ಇಷ್ಟರ ವರೆಗೆ ಬೇರೆ ಯಾರಲ್ಲಿಯೂ ಕೈ ವ ಎಗಿದು ನನಗೆ ಇಂತಹದು ಕೊಡು ಸ್ವಾಮಿ ಎಂದು ಕೇಳಿದವನೆ ಅಲ್ಲ. ನನ್ನಲ್ಲಿ ಯಾರು ಏನನ್ನು ಕೇಳುವರೊ ಅಂತಹವರ ಮನದಿಷ್ಟವನ್ನು ಸಲ್ಲಿಸುತ್ತಾ ಬಂದವನು ನಾನು. ಕೊಡುವ ಯೋಗ್ಯತೆ ನಿನಗೆ ಮಾತ್ರ ಹೊಸ ಲೇದು ತಿಳಿದಿರುವೆಯಾ? ಆ ವಿಷಯ ಬಿಡು. ಎರಡೂ ಕೈಗಳನ್ನು ಜೋಡಿಸಿ ಸ್ವಾಮಿ ನನಗೆ ಇಂತಹುದು ಬೇಕು ಎಂದು ನನ್ನಲ್ಲಿ ನೀನು ಬೇಡು. ನಿನಗೆ ಬೇಕಾದ್ದನ್ನು ನಾನು ಕೊಡುತ್ತೇನೆ. ನಾನು ಕೊಡುವುದರಲ್ಲಿ ಮೇಲ ಗೈಯವನು.

ವಿಷ್ಣು: ಓ ಹೋ, ಹೀಗೋ ವಿಚಾರ! ನೀನು ಕೊಡುವುದರಲ್ಲಿ ಹೆಚ್ಚಿನವನೆ? ನಾನು ಕೇಳಬಹುದಿತ್ತು. ಆದರೆ ಒಂದು ಅನುಮಾನ.

ರಾಗ ಬೇರಡೆ—ಅಷ್ಟತಾಳ

ಪದ್ಯ: ಮನಸೊಡಂಬಡದಿದಕೆ ಪೇಳ್ವುದನೂ। ನೀನಲ್ಲಗಳೆದರೆ ಘನ ಬಲಾನ್ವಿತ ನಿನ್ನೊಳಿದಿರಾನೂ। ರಣದ ಸಿದ್ಧತೆ ಗೈದು ಬಲುದಿನ। ಸಣಸಿದರ ಜಯಸೋಕದದರಿಂ। ದಣಿವುದಕ್ಕಾದಿಯಲಿ ತಕ್ಕುದ। ನ ಗೊಳಿಸೆ ಹಿತವೆನುತ ತಿಳುಹುವೆ ॥ ೧ ॥

ವಿಷ್ಣು : ವಾಲಿ, ನೀನು ತಿಳಿಸಿದಂತೆ ನಾನು ನಡೆಯಲಿಕ್ಕೆ ನನ್ನ ಮನಸ್ಸೇ ಒಪ್ಪುವುದಿಲ್ಲ ಏಕೆಂದರೆ ಇಷ್ಟರವರೆಗೆ ನಾನು ಕೊಡುತ್ತಾ ಬಂದವ ನಲ್ಲವೆ? ಮತ್ತೊಬ್ಬರಲ್ಲಿ ಬೇಡಿ ನನಗೆ ಅಭ್ಯಾಸವೇ ಇಲ್ಲ: ಆದರೆ ನಾನೀಗ ಕೇಳುವುದಿಲ್ಲವೆಂದು ಹಠ ಹಿಡಿದು ಕುಳಿತುಕೊಳ್ಳಲು ನೀನು ಬಿಡಲಿಕ್ಕಿಲ್ಲ. ಒಂದಾ ಬೇಡಬೇಕು. ಇಲ್ಲವೇ ಯುದ್ಧಮಾಡಬೇಕು. ಅಂತು ಯುದ್ಧ ಮಾಡಿ ಕಷ್ಟಪಡುವ ಬದಲು ಮರ್ಯಾದೆ ಬಿಟ್ಟು ಬೇಡುವುದೇ ಒಳ್ಳೆಯದು. ಏನಾದರಾಗಲಿ ನಿನ್ನಲ್ಲಿ ನಾನು ಕೇಳುವುದೆಂದೆ ನಿರ್ಧರಿಸುವೆನು. ಒಂದು ವೇಳೆ ನಿನಗೆ ಕೊಡಲು ಮನಸ್ಸಿಲ್ಲದುದನ್ನು ನಾನು ಕೇಳಿದರೆ ನೀನದನ್ನು ಕೊಡು

ವುದಿಲ್ಲವೆಂದು ಹೇಳಿದರೆ ನಿನ್ನನ್ನು ಗದರಿಸಿ, ಬೆದರಿಸಿ ಅದನ್ನು ಪಡೆಯುವಂತಹ ಶಕ್ತಿ ನನ್ನಲ್ಲಿ ಇಲ್ಲ. ಹಾಗಾಗಿ ನೀನು ಕೊಡುತ್ತೀಯೋ ಇಲ್ಲವೋ ಎನ್ನುವ ಸಂದೇಹದಲ್ಲಿದ್ದೇನೆ. ನನ್ನ ಸಂದೇಹ ದೂರವಾಗಿ ನಾನು ಕೇಳಬೇಕಾದರೆ ನೀನು ನನ್ನ ಕೈತಟ್ಟಿ ನಂಬಿಕೆ ಕೊಡಬೇಕು. ಏನು ಹೇಳುತ್ತಿ?

ವಾಲಿ: ವಿಷ್ಣು, ನಿನ್ನ ಮರುಳು ಮಾತಿಗೆ ನಾನೇನು ಹೇಳಲಿ? ನಾನು ಮೋಸ ಮಾಡುವೆನೆಂದು ಭಾವಿಸಿರುವೆಯಾ? ಸುಳ್ಳು, ಮೋಸ, ವಂಚನೆ ನಾನಿರುವ ಊರಿನಲ್ಲಿಯೇ ಇಲ್ಲ. ಅಂತಹ ವರ್ತನೆ ಏನೆಂಬುದೇ ನಾನು ತಿಳಿದವನಲ್ಲ. ಆದರೂ ನಿನ್ನ ಮನಸ್ಸಿನ ಸಮಾಧಾನಕ್ಕಾಗಿ ಕೈಗೆ ಕೈ ಹೊಡೆದು ಭಾಷೆ ಕೊಡುತ್ತೇನೆ. ಇದೋ ನೀನು ಏನನ್ನೇ ಕೇಳು ಅದನ್ನು ಅನುಮಾನ ಪಡದೆ ಕ್ಷಣ ಮಾತ್ರದಲ್ಲಿ ಕೊಡುತ್ತೇನೆ. ಖಂಡಿತ ಕೇಳು

ವಿಷ್ಣು : ವಾಲಿ, ಈಗ ನನಗೆ ಧೈರ್ಯವಾಯಿತು. ಅಹರೆ ವಾಲಿ, ನೀನು ಅಪರಿಮಿತ ಶಕ್ತಿಯುತನೂ, ಧೈರ್ಯಶಾಲಿಯೂ, ಎಲ್ಲಾ ಶಾಸ್ತ್ರಗಳನ್ನು ಬಲ್ಲವನೂ, ಇಷ್ಟೆಲ್ಲ ಯೋಗ್ಯತೆಯುಳ್ಳವನೂ ಆಗಿದ್ದು ಏನು ಪ್ರಯೋಜನ? ನನ್ನ ಕೈಯಲ್ಲಿ ಸಿಕ್ಕಿಬಿದ್ದೆಯಲ್ಲ! ಭಾಷೆ ಕೊಟ್ಟು ಕೆಟ್ಟುಹೋದೆ! ಏನು ಹೇಳಿದರೂ ನಿನ್ನ ಕುಲ ಸ್ವಭಾವ ಬಿಡದು ಕಂಡಿತು. ನನಗೆ ಬೇರೇನೂ ಬೇಡ. ಬೇಕಾದುದು ನಿನ್ನ ಪ್ರಾಣ ಮಾತ್ರ. ಅದನ್ನೇ ಕೊಡು.

ವಾಲಿ: ವಿಷ್ಣು, ನಿನಗೆ ನನ್ನ ಪ್ರಾಣ ಬೇಕೆ? ಇದು ಸತ್ಯವೆ? ಹಾ! ಶಿವನೆ!

ರಾಗ ಸಾಂಗತ್ಯ ರೂಪಕ

ಪದ್ಯ: ವೃಥ ಮಾಡುವನಿಗೆ ತಾತನು ಬೇಡ್ವುದೆಲ್ಲವ। ಕಡೆಗಾಗಿದೆ ಮತಿ ಮರೆದು॥ ತೋರಲಿಲ್ಲ। ಪ್ರಾಣವಿತ್ತುದರಿಂದ ಮನದಿಷ್ಟ। ಪಡೆಯೆಂದೆ ದೆಯೊಡ್ಡಿ ನಿಂದಾ ॥೧॥

ವಾಲಿ: ಶ್ರೀ ಹರಿ! ಈಗ ನನ್ನ ತಂದೆಯು ನನಗೆ ತಿಳಿಸಿದಂತಹ ವಿಷಯವೆಲ್ಲವೂ ಸತ್ಯವೆಂದು ನನ್ನ ಬುದ್ಧಿಗೆ ಹೊಳೆಯುತ್ತಿದೆ. ಮೊದಲು

ಅವರ ಮಾತುಗಳನ್ನೆಲ್ಲ ಲಕ್ಷ್ಯಕ್ಕೆ ತರಲಿಲ್ಲ. ಕಾರಣ ನನ್ನ ಮತಿಯೇ ಕೆಲಸ ಮಾಡುತ್ತಿರಲಿಲ್ಲ. ಈಗ ತನ್ನಷ್ಟಕ್ಕೆ ನಿನ್ನ ಕುರಿತಾದ ಎಲ್ಲ ವಿಷಯದ ಜ್ಞಾನೋದಯವಾಗುತ್ತಿದೆ. ಓ ಸ್ವಾಮೀ, ನೀನು ಯಾರು? ನಿನ್ನ ಯೋಗ್ಯತೆ ಏನು? ಎಂದು ಬಣ್ಣಿಸುವರೆ ನನ್ನ ಈ ಒಂದು ನಾಲಿಗೆಯಿಂದ ಸಾಧ್ಯವಿಲ್ಲ. ಒಟ್ಟು ಈ ಜಗದ ನಿಯಾಮಕನು ನೀನು. ನಿನ್ನ ಚೇತನ ಪ್ರತಿಯೊಂದರಲ್ಲೂ ಇರುವುದರಿಂದಲೇ ಎಲ್ಲವೂ ಚಲಿಸುತ್ತಿರುವುದು. ಓ ಪರಮಾತ್ಮಾ, ನಿನ್ನ ಮಾತಿನ ಅರ್ಥ ನನಗೆ ಈಗ ಸರಿಯಾಗಿ ತಿಳಿಯಿತು. ನನ್ನದೇಹದೊಳಗಿರುವ ಆತ್ಮ ನಿನ್ನದೇ. ನೀನು ನನ್ನ ಪ್ರಾಣವನ್ನು ಕೇಳುವುದೆಂದರೆ ಅನ್ಯರ ಸೊತ್ತನ್ನು ಕೇಳುವುದಲ್ಲ. ನಿನ್ನದನ್ನು ನೀನು ಕೊಡು ಎಂದು ಕೇಳಿದುದಷ್ಟೇ. ಅದನ್ನು ಕೊಡುವುದಿಲ್ಲ ಎಂದು ಹೇಳುವ ಹಕ್ಕಾದರೂ ನನಗಿದೆಯೇ? ಭಗವಂತ ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ. ನಿನ್ನದಾಗಿರುವ ಆತ್ಮವನ್ನು ನಿನಗೆ ಅರ್ಪಿಸುತ್ತೇನೆ. ಇದೋ ನನ್ನ ಪ್ರಾಣವನ್ನು ತೆಗೆದುಕೋ. ಸಂತೋಷದಿಂದ ಕೊಡುತ್ತೇನೆ.

ಪದ್ಯ: ನಿನ್ನಿಂದ ಬಹುಕಾರ್ಯ ವಿನ್ನಷ್ಟು ದಿನೆಯಿದ। ಕೆನ್ನದಾಗಿರಲಿ ಲೋಕದಲೀ॥ ದುರ್ನೀತಿಯುತನಾಗದಿರು ಮನ ಬಂದಂತಿ। ದನ್ನು ನಾ ಕೊಳ್ಳುವೆನೆಂದೂ ॥ ೨ ॥

ವಿಷ್ಣು: ವಾಲಿ, ನಿನ್ನ ವಿಚಾರವತ್ತಾದ ಮಾತಿಗೆ ಮೆಚ್ಚಿದೆ. ಪ್ರಾಣವನ್ನು ತೆಗೆದುಕೊ ಎಂದು ಎದ್ದೆಯೊಡ್ಡಿ ನಿಂದಿರುವಿಯಲ್ಲ! ಸ್ವಲ್ಪ ಸೈರಿಸು. ಅವಸರ ಮಾಡಬೇಡ. ವಾಲಿ, ನೀನು ವಿಶೇಷ ಬಲಶಾಲಿ. ನಿನ್ನಂತಹವನನ್ನು ತೆಗೆಯುವುದು ಈಗ ಸುಲಭವಾದರೂ ಮರಳಿ ಪಡೆಯುವುದು ಬಲು ಕಷ್ಟಸಾಧ್ಯ. ನೀನು ನಿನಗಾಗಿ ಬದುಕಬೇಕಾದುದಿಲ್ಲ. ಈ ಲೋಕಕ್ಕಾಗಿ ನಿನ್ನಿಂದ ಇನ್ನೂ ತುಂಬಾ ಕೆಲಸಗಳು ಈ ಜಗತ್ತಿನಲ್ಲಿ ಆಗಲಿಕ್ಕಿವೆ. ಹಾಗಾಗಿ ಈಗ ನಿನ್ನ ಪ್ರಾಣ ನನಗೆ ಬೇಡ. ಮುಂದೆ ಎಂದಾದರೂ ನನಗೆ ಬೇಕಾದಾಗ ತೆಗೆದುಕೊಳ್ಳುತ್ತೇನೆ. ಇನ್ನು ಮುಂದೆ ನಿನ್ನ ಪ್ರಾಣವು ನನ್ನದಾಗಿ ನಿನ್ನಲ್ಲಿಯೇ ಇರಲಿ.

ವಾಲಿ: ಪರಮಾತ್ಮ ನಿನ್ನ ಅಪ್ಪಣೆಯಂತೆ ನಡೆಯುತ್ತೇನೆ. ಇನ್ನು ಇಲ್ಲಿ ಏಕೆ ನಿಲ್ಲುವುದು? ನನ್ನ ಸ್ಥಾನವನ್ನು ಸೇರುವುದು ಲೇಸು. ಹೋಗುವ ಮುನ್ನ ಅಪ್ಪನಲ್ಲಿ ತಿಳಿಸಲೇ ಬೇಕು. ಜನಕ, ನಾನಿನ್ನು ಬರಲೆ? ಹೋಗುವುದಕ್ಕೆ ನಿಮ್ಮ ಅಪ್ಪಣೆ ತಾನೆ?

ಪದ್ಯ: ಧರೆಯೊಳಗೋರ್ವರಿಂದೋರ್ವರು ಶಕ್ತಿಯಿಂ। ಮೆರೆವರು ಮುನಿದು ನಿನ್ನೊಡನೇ॥ ಧುರಕೆ ನಿಂದರಲವರರ್ಧ ಶಕ್ತಿಯು ಬಪ್ಪ। ತೆರ ಕೆಂದು ಸಮುಹಾರವಿತ್ತ ॥ ೫ ॥

ಇಂದ್ರ: ಕಂದ, ಸ್ವಲ್ಪ ನಿಲ್ಲು. ನಿನಗೊಂದು ಸೂಚನೆಯಿದೆ. ಇನ್ನು ಮುಂದೆ ನಿನ್ನ ಪ್ರಾಣವು ನಿನ್ನದಲ್ಲ. ಅದು ಅನ್ಯರಿಗೆ ಸೇರಿದ್ದೆಂದಾಯಿತು. ಅದರಲ್ಲಿಯೂ ಅದು ದೇವರ ಸೊತ್ತು ಅದೇಂದೂ ಮಲಿನವಾಗಬಾರದು. ಅಂದರೆ ನೀನು ಯುದ್ಧವೀರನು. ಸಮರದ ಸನ್ನಿವೇಶ ಒದಗಿದಾಗ ಹೇಳಲಿಕ್ಕಾಗುವುದಿಲ್ಲ. ಕಾಲ ಕಳೆದಂತೆ ಈ ಜಗತ್ತಿನಲ್ಲಿ ಒಬ್ಬರಿಂದ ಒಬ್ಬರು ಬಲಿಷ್ಟರೇ ಹುಟ್ಟಿಕೊಳ್ಳುತ್ತಾರೆ. ಅದಕ್ಕಾಗಿ, ಇನ್ನು ಮುಂದೆ ಎಂತಹ ವೀರನಲ್ಲಿಯೇ ನಿನಗೆ ಯುದ್ಧ ಒದಗಿದರೂ ನಿನಗೇನೂ ತೊಂದರೆಯಾಗದಂತೆ, ಇದೋ ಈ ಸುಮಹಾರವನ್ನು ನಿನ್ನ ಕೊರಳಿಗೆ ಹಾಕುತ್ತೇನೆ. ವಾಲಿ, ಈ ಕಾಂಚನ ಮಾಲೆಯ ಪ್ರಭಾವ ಗೊತ್ತೆ? ನೀನು ಯಾವ ವಿರೋಧಿಯಲ್ಲಿಯೇ ಯುದ್ಧಕ್ಕೆ ನಿಲ್ಲು ಆತನ ದೇಹದ ಅರ್ಧ ಶಕ್ತಿ ನಿನ್ನ ಶರೀರಕ್ಕೆ ಬರುವುದು. ಇದಕ್ಕೆ ಸಂದೇಹವಿಲ್ಲ. ಇನ್ನು ಇಲ್ಲಿ ನಿಲ್ಲಬೇಡ. ನಿನಗೆ ಶುಭವಾಗಲಿ. ಹೊರಡು.

ವಾಲಿ: ಆಗಲಿ ಅಪ್ಪ, ಇಲ್ಲಿಂದ ಒಂದೇ ನೆಗೆತ ಕಿಷ್ಕಿಂಧೆಯ ಕಡೆಗೆ ನೋಡು. ಜೈ ಶಂಕರ.

ಮಂಗಲ

ರಾಗ ಮೋಹನ—ಅಷ್ಟತಾಳ

ಮಂಗಲ ಮಂಗಲ ಮತ್ಸ್ಯರೂಪನಿಗೆ। ಮಂಗಲ ಮಂಗಲ ಕೂರ್ಮನಿಗೆ॥ ಮಂಗಲ ವರಾಹವತಾರ ನೃಸಿಂಹನಿಗೆ। ಮಂಗಲ ವಾಮನ ಮೂರುತಿಗೆ॥

ಮಂಗಲಂ ಜಯ। ಮಂಗಲಂ ॥ ೧ ॥ ಮಂಗಲ ಮಂಗಲ ಪರಶುರಾಮನಿಗೆ। ಮಂಗಲ ದಶರಥರಾಮನಿಗೆ॥ ಮಂಗಲ ಶ್ರೀ ಕೃಷ್ಣ ಬೌದ್ಧ ಕಲ್ಕ್ಯನಿಗೆ। ಮಂಗಲ ಲಕ್ಷುಮಿ ನಾರಾಯಣಗೆ। ಮಂಗಲಂ। ಜಯ। ಮಂಗಲಂ ॥ ೨ ॥ ಸುರರ ಪ್ರಾರ್ಥನೆಯೊಳು ಶೋಣಿತಪುರದಿ। ದುರುಳ ಹಿರಣ್ಯನ ಸೀಳುತ ಹುದದಿ॥ ತರಳ ಪ್ರಹ್ಲಾದಗೆ ಸ್ಥಿರ ಸಾಮ್ರಾಜ್ಯವ। ಕರುಣಿಸಿ ಪೊರೆದ ಶ್ರೀ ನರಸಿಂಹಗೆ॥ ಮಂಗಲಂ। ಜಯ। ಮಂಗಲಂ ॥ ೩ ॥

॥ ಶುಭಮಸ್ತು ॥